ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**
ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ – 582 101
**Raitha Bhavana, General Cariappa Circle, Gadag – 582 101**
*Regional Office: Grameenabhivrudhi Bhavan, Ananda Rao Circle, Bengaluru-560 009*
**E-mail: ksrdpru@gmail.com** **Phone: 08372-230338**

ದಿನಾಂಕ 19-05-2022 ಗುರುವಾರದಂದು ಬೆಳಗ್ಗೆ 10.30 ಘಂಟೆಗೆ, ವಿಶ್ವವಿದ್ಯಾಲಯದ ರೈತ ಭವನದ ಸಭಾಂಗಣದಲ್ಲಿ ಜರುಗಿದ ೧೧ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳು.

**PROCEEDINGS OF THE ELEVENTH MEETING OF THE EXECUTIVE COUNCIL HELD ON 19-05-2022 AT 10.30 AM in MEETING HALL, RAITH BHAVAN,KSRDPRU, GADAG.**

**MEMBERS PRESENT:**

1. Prof. Vishnukant S Chatpalli — Chairperson
   Vice Chancellor , KSRDPRU, Gadag.
2. Prof. Dr. V. Veerabhadraiah, — Member
   Former Director of Extension, UAS, Bengaluru
   #47/1,BELAKU,1st Floor, 14th Main,17th Cross,
   Malleswaram, Bengaluru-55.
3. Shri. Basavaraj Patil — Member
   Ashirwad Building, Ashok Circle,
   Ranebennur – 581115
4. Shri. Vishweshwar Sajjan — Member
   Hulikere, Kudligi Taluk, Ballary Dist
5. Shri. Sudheer Ghorpade — Member
   No-32/22, Girija,Near CDO, Jain School, Gadag.
6. Dr.D.B.Ramesh — Member
   #77, 5th Main, Jabber Block Palace Guttahalli,
   Bangalore.
7. Prof. Shanmukha A, — Member
   Dept of P G Studies and Research in Political
   Science, Kuvempu University, Shivamogga.
8. Dr. Anuradha Sheshagiri — Member
   #15, 10th Cross,Opp Maruti Temple, Shashtri,
   Layout, Bhagyanagar,Koppal-583231.
9. Shri. Sanjay Nadagouda — Member
   AT: Saptapura, Tq: Athni, Dist: Belagavi-591304.

10 Dr. Prakash Bhat, — Member
   Director (I/C),
   Centre for Training, Publication and Supervision,
   KSRDPRU, Gadag.

11 Prof B L Lakkannavar, — Ex-officio Member-Secretary
   Registrar, KSRDPRU.

**Leave of Absence:**

1. Dr.S.Rajendra Prasad — Member
   The Vice Chancellor
   University of Agricultural Sciences,
   G.K.V.K., Bengaluru-560 065.
2. Dr. Karisiddappa, — Member
   The Vice Chancellor,
   Visvesvaraya Technological University,
   Belagavi – 590 018.
3. Prof. N. Sivanna — Member
   Director (I/C)
   Centre for Research, Innovation and Evaluation
   KSRDPRU, Gadag.
4. The Principal Secretary, — Member
   Rural Development and Panchayat Raj
   Department,
   Govt. of Karnataka, M.S. Building,
   Bengaluru-560 001
5. The Principal Secretary, — Member
   Department of Agriculture,
   Govt. of Karnataka, M.S. Building,
   Bengaluru-560 001
6. The Principal Secretary, — Member
   Social Welfare Department,
   Govt. of Karnataka, M.S. Building,
   Bengaluru-560 001
7. The Principal Secretary, — Member
   Health Department,
   Govt. of Karnataka, M.S. Building,
   Bengaluru-560 001
8. The Principal Secretary, — Member
   Labour Department,
   Govt. of Karnataka, M.S. Building,
   Bengaluru-560 001

ಪ್ರಾರಂಭದಲ್ಲಿ ಪ್ರೋ. ಬಸವರಾಜ ಲಕ್ಕಣ್ಣವರ್, ಕುಲಸಚಿವರು, ಎಲ್ಲ ನೂತನವಾಗಿ ನೇಮಕಗೊಂಡ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರನ್ನು 11ನೇಯ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗೆ ಆತ್ಮೀಯವಾಗಿ ಸ್ವಾಗತಿಸಿದರು. ಮುಂದುವರೆದು, ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ.ಎಸ್.ಚಟಪಲ್ಲಿ ಇವರಿಗೆ ಪ್ರಾಸ್ತಾವಿಕ ನುಡಿ ಮಾತನಾಡಲು ವಿನಂತಿಸಿದರು.

ಮಾನ್ಯ ಕುಲಪತಿಗಳು, ಎಲ್ಲ ನೂತನವಾಗಿ ನೇಮಕಗೊಂಡ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರನ್ನು ಆತ್ಮೀಯವಾಗಿ ಅಭಿನಂದಿಸುತ್ತಾ 11ನೇಯ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗೆ ಸ್ವಾಗತಿಸಿದರು. ಮುಂದುವರೆದು, ಅತೀ ಕಡಿಮೆ ಸಮಯದಲ್ಲಿ ವಿಶ್ವವಿದ್ಯಾಲಯಕ್ಕೆ ಭದ್ರ ಬುನಾದಿಯನ್ನು ಹಾಕಿ ಯಶಸ್ವಿಯಾಗಿ

ಮುನ್ನಡೆಸಿ ವಿಶ್ವವಿದ್ಯಾಲಯದ ಬೆಳವಣಿಗೆಗೆ ಅತ್ಯುತ್ತಮ ಸಲಹೆ ಮತ್ತು ಸಹಕಾರವನ್ನು ನೀಡಿದ ಪ್ರಥಮ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರುಗಳಿಗೆ ಧನ್ಯವಾದಗಳನ್ನು ತಿಳಿಸುತ್ತಾ, ಅವರ ಕಾರ್ಯಕ್ಷಮತೆ ಮತ್ತು ಅವಿಸ್ಮರಣೀಯ ಕೊಡುಗೆಯನ್ನು ಶ್ಲಾಘನೀಯಸಿದರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಲು ನೂತನ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರನ್ನು ನೇಮಕಮಾಡಿರುವದಕ್ಕೆ, ಘನತೆವೆತ್ತ ರಾಜ್ಯಪಾಲರಿಗೆ, ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಹಿಂದಿನ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ಸಚಿವರಾದ, ಶ್ರೀ ಕೆ.ಎಸ್.ಈಶ್ವರಪ್ಪ, ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಮತ್ತು ಪ್ರಧಾನ ಕಾರ್ಯದರ್ಶಿಗಳು (ಪಂ.ರಾ) ಇವರುಗಳಿಗೆ ಧನ್ಯವಾದಗಳನ್ನು ಸಲ್ಲಿಸಿದರು. ಮುಂದೆಯೂ ಇದೇ ರೀತಿಯ ಮಾರ್ಗದರ್ಶನ ಮತ್ತು ಸಹಕಾರ ನೀಡುವಂತೆ, ಎಲ್ಲ ನೂತನ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಿಗೆ ಕೋರಿದರು. ಜೊತೆಗೆ, ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರುಗಳಿಗೆ ವ್ಯಯಕ್ತಿಕ ಪರಿಚಯ ಮಾಡಿಕೊಡಲು ವಿನಂತಿಸಿದರು. ಅದರಂತೆ ಕಾರ್ಯನಿರ್ವಾಹಕ ಪರಿಷತ್ತಿನ ಎಲ್ಲ ನೂತನ ಸದಸ್ಯರುಗಳು ಸಭೆಗೆ ತಮ್ಮ ವ್ಯಯಕ್ತಿಕ ಪರಿಚಯ ಮಾಡಿಕೊಂಡರು. ನಂತರ, ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಅಧಿಕಾರಿ ವೃಂದ ಮತ್ತು ಸಿಬ್ಬಂದಿಗಳನ್ನು ನೂತನ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರುಗಳಿಗೆ ಪರಿಚಯಿಸಿದರು.

ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದಲ್ಲಿ ದಿನಾಂಕ 29-03-2022 ತದನಂತರ ಕೈಗೊಂಡ ಶೈಕ್ಷಣಿಕ ಮತ್ತು ಹಲವು ಕಾರ್ಯ ಚಟುವಟಿಕೆಗಳ ಸಂಬಂಧಪಟ್ಟಂತೆ ವಿವರಿಸಿದರು. ಅದರ ಮುಖ್ಯಾಂಶಗಳು ಈ ಕೆಳಗಿನಂತಿವೆ.

- ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಅಡಿಯಲ್ಲಿ ಪ್ರಾರಂಭಿಸಲಾದ ಸ್ನಾತಕ (ಪದವಿ) ಕಾರ್ಯಕ್ರಮಗಳ ಪ್ರಥಮ ಸೆಮಿಸ್ಟರನ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರ್ಣಗೊಂಡಿರುತ್ತದೆ.
- ಮಧ್ಯಾಹ್ನದ ಬಿಸಿ ಊಟದ ಯೋಜನೆಯಲ್ಲಿ ಶಾಲಾ ಮಕ್ಕಳಿಗೆ ಮೊಟ್ಟೆ ಮತ್ತು ಹಾಲು ವಿತರಿಸುತ್ತಿದ್ದು, ಅದರ ಪೌಷ್ಠಿಕತೆಯ ಮೌಲ್ಯಮಾಪನ ಕುರಿತು ಗದಗ ಮತ್ತು ಯಾದಗೀರ ಜಿಲ್ಲೆಗಳಲ್ಲಿ ವಿಶ್ವವಿದ್ಯಾಲಯದ ವತಿಯಿಂದ ಸಮೀಕ್ಷೆ ಕೈಗೊಳ್ಳಲಾಗಿರುತ್ತದೆ. ಇದರ ಕುರಿತಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ವಿಶ್ವವಿದ್ಯಾಲಯಕ್ಕೆ ಆಗಮಿಸಿ ಸಭೆಯಲ್ಲಿ ಚರ್ಚಿಸಿ, ಅದರಂತೆ ಸರ್ಕಾರಕ್ಕೆ ಪ್ರಾಥಮಿಕ ಸಮೀಕ್ಷಾ ವರದಿ ಸಲ್ಲಿಸಲಾಗಿರುತ್ತದೆ.
- ಅಮೃತ ಗ್ರಾಮ ಪಂಚಾಯಿತಿ ಯೋಜನೆಯಡಿ ಸರ್ಕಾರವು ರಾಜ್ಯದ ಆಯ್ದ 750 ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನ ಮಾಡಿರುವ ಕಾರ್ಯಕ್ರಮಗಳ ಮೌಲ್ಯಮಾಪನ ವಿಶ್ವವಿದ್ಯಾಲಯದಿಂದ ಕೈಗೊಂಡು ವರದಿ ಸಲ್ಲಿಸುವ ಕುರಿತಂತೆ, ನಿರ್ದೇಶಕರು, ಗ್ರಾಅ ಮತ್ತು ಪಂ.ರಾಜ್ ಇಲಖೆ, ಇವರೊಂದಿಗೆ ಸಭೆ ಸೇರಿ ಚರ್ಚಿಸಲಾಗಿರುತ್ತದೆ.
- ಭಾರತ ಸರ್ಕಾರದ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಗದಗ ಜಿಲ್ಲೆಯ ಗ್ರಾಮ ಪಂಚಾಯತ್‌ಗಳಲ್ಲಿ ನಿರ್ಮಿಸಿರುವ ವೈಯಕ್ತಿಕ ಶೌಚಾಲಯಗಳ ಸಮೀಕ್ಷೆಯನ್ನು ಗದಗ ಜಿಲ್ಲಾ ಪಂಚಾಯತ್ ಜೊತೆಗೆ ಕೈಗೊಳ್ಳಲಾಗುವುದು.
- ವಾಯವ್ಯ ಕರ್ನಾಟಕ ಸಾರಿಗೆ ನಿಗಮದ ಒಟ್ಟು ಚಿರಾಸ್ತಿಗಳ ಜಿಯೋ ಟ್ಯಾಗಿಂಗ್ (Asset Mapping), ಬಸಗಳ ನೈಜ್ಯ ಸಮಯದ ಸಂಚರಿಸುವಿಕೆ (Real time Bus tracking) ಮತ್ತು ಡಿಜಟಲಿಕರಣ ಕಾರ್ಯವನ್ನು ಸದರಿ ಇಲಾಖೆ ಜೊತೆಗೆ ಕೈಗೊಳ್ಳಲಾಗುವುದು.

- ➢ಪಶು ಸಂಗೋಪನೆ ಇಲಾಖೆಯ ಮಹತ್ತರ ಯೋಜನೆಯಾದ "ಜಿಲ್ಲೆಗೊಂದು ಗೋಶಾಲೆ" ಯೋಜನೆಯಡಿ ವಿಶ್ವವಿದ್ಯಾಲಯಕ್ಕೆ ಗೋಶಾಲೆ ಮಂಜುರಾಗಿದ್ದು, ಸದರಿ ಗೋಶಾಲೆಯ ನಿರ್ಮಾಣದ ಭೂಮಿ ಪೂಜೆಯನ್ನು ಗದಗ ಜಿಲ್ಲಾ ಉಸ್ತವಾರಿ ಸಚಿವರು ದಿನಾಂಕ 11-04-2022 ರಂದು ಜರುಗಿಸಿರುತ್ತಾರೆ.
- ➢ಭಾರತ ಸರ್ಕಾರದ ಖಾದಿ ಗ್ರಾಮೋದ್ಯೋಗ ಮಿಶನ್‌ನ ಅಡಿಯಲ್ಲಿ ಆರಂಭಗೊಂಡಿರುವ ಕಿನ್ನಾಳ ಗೊಂಬೆಗಳ ಕ್ಲಸ್ಟರ್ ಯೋಜನೆಯ ಸಾಂಸ್ಥಿಕ ಬೆಂಬಲ (Instituional Support) ಯೋಜನಾ ವರದಿಯನ್ನು ಖಾದಿ ಗ್ರಾಮೋದ್ಯೋಗ ಮಿಶನ್‌ಗೆ ಸಲ್ಲಿಸಲಾಗಿದೆ.
- ➢ಅಂಗ ವೈಕಲ್ಯ ಹಾಗೂ ಪುನರ ವಸತಿ ಯೋಜನೆಯನ್ನು ಸಕ್ರೀಯಗೊಳಿಸಲು ಮಾದರಿ ಸೌಲಭ್ಯ ಕೇಂದ್ರವನ್ನು ಗದಗ ಜಿಲ್ಲಾ ಪಂಚಾಯತ್, ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆ ಹಾಗೂ ಎನ್.ಜಿ.ಓಗಳಾದ ಡೆಲ್, ಸಿ.ಬಿ.ಆರ್ ನೆಟವರ್ಕ, ತಾಮರ್ ಟ್ರಸ್ಟ ಮತ್ತು ಬಿ.ಡಿ.ತಟ್ಟಿ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ ಸಂಸ್ಥೆಗಳ ಜೊತೆಗೆ ವಿಶ್ವವಿದ್ಯಾಲಯದ ಆವರಣದಲ್ಲಿ ಮಾದರಿ ಸೌಲಭ್ಯ ಕೇಂದ್ರವನ್ನು ನಿರ್ಮಿಸಿವುದು.

ಈ ಎಲ್ಲ ವಿಷಯಗಳ ಸವಿಸ್ತಾರ ವಿವರಣೆಯ ನಂತರ ಕಾರ್ಯಸೂಚಿಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಯಿತು.

**ವಿಷಯ ಸಂಖ್ಯೆ 1: ದಿನಾಂಕ 05-03-2022 ರಂದು ಜರುಗಿದ 10ನೇ ಕಾರ್ಯನಿರ್ವಾಹಕ ಪರಿಷತ್ತಿನ ಮತ್ತು 29-03-2022 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ 05-03-2022 ರಂದು ಜರುಗಿದ 10ನೇ ಕಾರ್ಯನಿರ್ವಾಹಕ ಪರಿಷತ್ತಿನ ಮತ್ತು 29-03-2022 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಿಕೊಡಲಾಗಿದೆ. ಸದರಿ ನಡಾವಳಿಗಳಿಗೆ ಸದಸ್ಯರಿಂದ ಆಕ್ಷೇಪಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ನಡಾವಳಿಗಳು ಸ್ಥಿರೀಕರಣಗೊಂಡಂತಾಗಿವೆ.

**ನಿರ್ಣಯ**

*ದಿನಾಂಕ 05-03-2022 ರಂದು ಜರುಗಿದ 10ನೇ ಕಾರ್ಯನಿರ್ವಾಹಕ ಪರಿಷತ್ತಿನ ಮತ್ತು 29-03-2022 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗಳ ನಡಾವಳಿಗಳಿಗೆ ಸದಸ್ಯರಿಂದ ಆಕ್ಷೇಪಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ಸ್ಥಿರೀಕರಿಸಲಾಯಿತು.*

**ವಿಷಯ ಸಂಖ್ಯೆ 2: ದಿನಾಂಕ 05-03-2022 ರಂದು ಜರುಗಿದ 10ನೇ ಕಾರ್ಯನಿರ್ವಾಹಕ ಪರಿಷತ್ತಿನ ಮತ್ತು 29-03-2022 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಿರ್ಣಯಗಳಿಗನುಸಾರ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಪರಿಗಣಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ 05-03-2022 ರಂದು ಜರುಗಿದ 10ನೇ ಕಾರ್ಯನಿರ್ವಾಹಕ ಪರಿಷತ್ತಿನ ಮತ್ತು 29-03-2022 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಿರ್ಣಯಗಳಿಗನುಸಾರ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿಗಾಗಿ ಮಂಡಿಸಲಾಗಿದೆ.

**ನಿರ್ಣಯ**

*ಮಾನ್ಯ ಕುಲಸಚಿವರು ಇದರ ಕುರಿತು ಸಂಕ್ಷಿಪ್ತವಾಗಿ ವಿವರಿಸಿದರು. ಕುಲಪತಿಗಳು ಮಾತನಾಡುತ್ತಾ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, SCP/TSP ಯ ಕ್ರಿಯಾ ಯೋಜನೆಯನ್ನು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವ್ಯಕ್ತಿತ್ವ ವಿಕಸನ ಮತ್ತು ಕೌಶ್ಯಲ್ಯ ವಿಕಸನ ಹೆಚ್ಚಿಸಲು ಹಲವು ಚಟುವಟಿಕೆಗಳಳಗೊಂಡ ಯೋಜನೆ ರಚಿಸಲಾಗಿದೆ ಎಂದು ವಿವರಿಸಿದರು.*

*ಮುಂದುವರಿದು, ಹಣಕಾಸು ಅಧಿಕಾರಿಗಳು SCP/TSP ಯೋಜನೆಯಡಿ ಕಳೆದ ಹಣಕಾಸು ವರ್ಷದಲ್ಲಿ ಮೊದಲ ಬಾರಿಗೆ ಅನುದಾನ ಬಿಡುಗಡೆಯಾಗಿರುತ್ತದೆ ಮತ್ತು ಪ್ರಸಕ್ತ ವರ್ಷಕ್ಕೆ ಸರ್ಕಾರದ ವತಿಯಿಂದ ಅನುದಾನ ನಿಗದಿಯಾಗಿರುವುದಿಲ್ಲ. ಆದ ಕಾರಣ ಕಾರ್ಯನಿರ್ವಾಹಕ ಪರಿಷತ್ತಿನ ಗಮನಕ್ಕೆ ತಂದು, ಪ್ರಸಕ್ತ ಸಾಲಿನಲ್ಲಿಯೂ ಅನುದಾನ ನಿಗದಿಗೊಳಿಸಲು ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಸಭೆಗೆ ವಿವರಿಸಿದರು. ಇದಕ್ಕೆ ಸಭೆಯಲ್ಲಿ ಸದಸ್ಯರು ಒಪ್ಪಿಗೆ ಸೂಚಿಸಿ, ಕೂಡಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, SCP/TSP ಯೋಜನೆಯಡಿ ಅನುದಾನ ಒದಗಿಸಲು ಕ್ರಮ ವಹಿಸುವಂತೆ ತಿಳಿಸಿದರು.*

*ಪ್ರೊ.ವೀರಭದ್ರಯ್ಯ ಅವರು ಮಾತನಾಡುತ್ತಾ, ವಿಶ್ವವಿದ್ಯಾಲಯ SCP/TSP ಯೋಜನೆಯಡಿ ಹಮ್ಮಿಕೊಂಡಿರುವ ಕಾರ್ಯ ಚಟುವಟಕೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು ಮತ್ತು ವಿದ್ಯಾರ್ಥಿಗಳ ಕೌಶ್ಯಲ್ಯ ವಿಕಸನಕ್ಕೆ ಕುರಿತು ಹಮ್ಮಿಕೊಂಡಿರುವ ಯೋಜನೆಗಳ ಮಾಹಿತಿ ಕೋರಿದರು. ಇದಕ್ಕೆ ಉತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ SCP/TSP ಯೋಜನೆಯಡಿ ಕೌಶ್ಯಲ್ಯ ಅಭಿವೃದ್ಧಿ ಕೇಂದ್ರ ನಿರ್ಮಾಣವಾಗುತ್ತಿದ್ದು ಈ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ/ ಆಸಕ್ತರಿಗೆ ತಂತ್ರಜ್ಞಾನ ಮತ್ತು ತಾಂತ್ರಿಕತೆಯ ಕೌಶ್ಯಲ್ಯ ವಿಕಸನದ ತರಬೇತಿ ನೀಡಲಾಗುವುದು ಎಂದು ವಿವರಿಸಿದರು. ಈಗಾಗಲೇ, ಗ್ರಾಮ ಪಂಚಾಯಿತಿಗಳ ಗ್ರಂಥಪಾಲಕರಿಗೆ, ಕಂಪ್ಯೂಟರ್ ತರಬೇತಿ ನೀಡಿದ ವಿಷಯ ತಿಳಿಸಿದರು.*

*ಪ್ರೋ. ಷಣ್ಮುಖ, ಇವರು ಮಾತನಾಡುತ್ತ, SCP/TSP ಯೋಜನೆಯಡಿ ತೆಗೆದುಕೊಳ್ಳಲಾಗಿರುವ ಕಾರ್ಯ ಚಟುವಟಿಕೆಗಳು ಸುಸ್ಥಿರತೆಗೆ ಪೂರಕವಾಗಿದೆ ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಅನುಕೂಲವಾಗುವುದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.*

*ದಿನಾಂಕ 05-03-2022 ರಂದು ಜರುಗಿದ 10ನೇ ಕಾರ್ಯನಿರ್ವಾಹಕ ಪರಿಷತ್ತಿನ ಮತ್ತು 29-03-2022 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಿರ್ಣಯಗಳಿಗನುಸಾರ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಕಾರ್ಯನಿರ್ವಾಹಕ ಪರಿಷತ್ತು ಗಮನಿಸಿ, ಅನುಮೋದಿಸಿತು.*

**ವಿಷಯ ಸಂಖ್ಯೆ 3: ದಿನಾಂಕ 29-03-2022 ರಂದು ಜರುಗಿದ ವಿಶೇಷ ಶೈಕ್ಷಣಿಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ 29-03-2022 ರಂದು ಜರುಗಿದ ವಿಶೇಷ ಶೈಕ್ಷಣಿಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಿಕೊಡಲಾಗಿದೆ. ಸದರಿ ನಡಾವಳಿಗಳಿಗೆ ಸದಸ್ಯರಿಂದ ಆಕ್ಷೇಪಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ನಡಾವಳಿಗಳು ಸ್ಥಿರೀಕರಣಗೊಂಡಂತಾಗಿವೆ.

**ನಿರ್ಣಯ**

*ದಿನಾಂಕ 05-03-2022 ರಂದು ಜರುಗಿದ 11ನೇ ಕಾರ್ಯನಿರ್ವಾಹಕ ಪರಿಷತ್ತಿನ ಮತ್ತು 29-03-2022 ರಂದು ಜರುಗಿದ ವಿಶೇಷ ಶೈಕ್ಷಣಿಕ ಪರಿಷತ್ತಿನ ಸಭೆಗಳ ನಡಾವಳಿಗಳಿಗೆ ಸದಸ್ಯರಿಂದ ಆಕ್ಷೇಪಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ಸ್ಥಿರೀಕರಿಸಲಾಯಿತು.*

**ವಿಷಯ ಸಂಖ್ಯೆ 04: ವಿಶ್ವವಿದ್ಯಾಲಯಕ್ಕೆ ಮಂಜೂರಾದ ಜಾಗದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಸೈಕ್ಲಿಂಗ್ ವೆಲೋಡ್ರಮ್ ನಿರ್ಮಿಸಲು ಈಗಾಗಲೇ ಮಂಜೂರು ಮಾಡಿರುವ 5 ಎಕರೆ ಜಮೀನಿಗೆ ಹೆಚ್ಚುವರಿ 5 ಎಕರೆ ಜಮೀನನ್ನು ನಿಗದಿಪಡಿಸಲು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.**

**ಪರಾಮರ್ಶನ ಟಿಪ್ಪಣಿ:**

ಗದಗ ಜಿಲ್ಲೆಯು ಸೈಕ್ಲಿಂಗ್ ಕ್ರೀಡೆಯಲ್ಲಿ ಹೆಸರುವಾಸಿಯಾಗಿದ್ದು ಸ್ಥಳಿಯ ಕ್ರೀಡಾಪಟುಗಳಿಗೆ ಉತ್ತೇಜನೆ ನೀಡಿರುವುದರ ಪ್ರಯುಕ್ತ ಒಳ್ಳೆಯ ಪ್ರತಿಭೆಗಳು ಸೈಕ್ಲಿಂಗ್‌ನಲ್ಲಿ ರಾಷ್ಟ್ರ ಮತ್ತು ಅಂತರಾಷ್ಟ ಮಟ್ಟದಲ್ಲಿ ಪದಕ ಪಡೆದುಕೊಳ್ಳುತ್ತಾ ಬಂದಿದ್ದಾರೆ. ಈ ಭಾಗದ ಸೈಕ್ಲಿಂಗ್ ಕ್ರೀಡಾಪಟುಗಳಿಗೆ ಸೈಕ್ಲಿಂಗ್ ವೆಲೋಡ್ರಮ್ ಮೈದಾನ ಇಲ್ಲದಿರುವದರಿಂದ ಬೇರೆ ಜಿಲ್ಲೆಗಳಿಗೆ ತೆರಳಿ ತರಬೇತಿ ಪಡೆಯುವ ಅನಿವಾರ್ಯತೆ ಇರುತ್ತದೆ. ಆದ್ದರಿಂದ ಈ ಭಾಗದ ಸೈಕ್ಲಿಂಗ್ ಕ್ರೀಡಾಪಟುಗಳಿಗೆ ಸೈಕ್ಲಿಂಗ್ ತರಬೇತಿ ಪಡೆಯಲು ಸೈಕ್ಲಿಂಗ್ ವೆಲೋಡ್ರಮ್ ಅಗತ್ಯವಿದ್ದು ಮತ್ತು ಭಾರತ ಸರಕಾರದ, **"ಖೇಲೋ ಇಂಡಿಯಾ"** ಯೋಜನೆ ಯಡಿಯಲ್ಲಿ ಸೈಕ್ಲಿಂಗ್ ವೆಲೋಡ್ರಮ್ ನಿರ್ಮಿಸಲು ಅವಕಾಶವಿರುವುದಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ

ಇಲಾಖೆ, ಗದಗ ರವರು ಮನವಿ ಪತ್ರ ಸಂಖ್ಯೆ:ಸನಿ/ಯುಸೇಕ್ರೀಇ/ಗದಗ/ಸಿಆರ್-57-2020-21, ದಿನಾಂಕ:10-11-2021, ಸಲ್ಲಿಸಿರುತ್ತಾರೆ. ಗದಗ ಜಿಲ್ಲೆಯ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗದಗ ಆವರಣದಲ್ಲಿ ಲಭ್ಯವಿರುವ ಜಮೀನಿನ ಪೈಕಿ, ಗರಿಷ್ಠ 10.00 ಎಕರೆ (ಹತ್ತು ಎಕರೆ) ಜಾಗವನ್ನು ಒದಗಿಸಿಕೊಡಲು ಪತ್ರದಲ್ಲಿ ಕೋರಿರುತ್ತಾರೆ.

ಈ ಕುರಿತು ದಿನಾಂಕ 24-12-2021 ರಂದು ನಡೆದ 8ನೇ ಕಾರ್ಯನಿರ್ವಾಹಕ ಪರಿಷತ್ತ ಸಭೆಯಲ್ಲಿ ಸದರಿ ವಿಷಯವನ್ನು ಚರ್ಚಿಸಿ, ವಿಶ್ವವಿದ್ಯಾಲಯಕ್ಕೆ ಮಂಜೂರಾದ ಜಾಗದಲ್ಲಿ 5 ಎಕರೆ ಜಾಗವು ಸೂಕ್ತವಿರುವುದಾಗಿ ಕಂಡು ಬಂದಿರುವದರಿಂದ, ಸೈಕ್ಲಿಂಗ್ ವೆಲೋಡ್ರಮ್ ನಿರ್ಮಿಸಲು 5 ಎಕರೆ ಜಾಗವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ಇವರಿಗೆ ಅಗತ್ಯತೆಗನುಸಾರ ನಿಗದಿಪಡಿಸಲು, ಕಾರ್ಯನಿರ್ವಾಹಕ ಪರಿಷತ್ತ ಸಭೆಯಲ್ಲಿ ಅನುಮೋದಿಸಲಾಗಿದೆ.

ಮುಂದುವರಿದು, ಮಾನ್ಯ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ರವರು ಸೈಕ್ಲಿಂಗ್ ವೆಲೋಡ್ರಮ್ ಮೈದಾನ, ವಸತಿ ಹಾಗೂ ಇನ್ನಿತರ ಸೌಲಭ್ಯಕ್ಕಾಗಿ ಮತ್ತು ಅಂತರಾಷ್ಟ್ರೀಯ ಕ್ರೀಡಾ ಸಂಘಟನೆಯ ಉದ್ದೇಶ ಪ್ರಯುಕ್ತ ಇನ್ನು 5 ಎಕರೆ ಹೆಚ್ಚುವರಿ ಜಾಗವನ್ನು ನೀಡಬೇಕೆಂದು ಮನವಿ ಪತ್ರ ಸಂಖ್ಯೆ: ಡಿ.ವೈ.ಇಎಸ್/ಖೇಲೋ ಇಂಡಿಯಾ/12/2020-21, ದಿನಾಂಕ: 09-03-2022, ಸಲ್ಲಿಸಿರುತ್ತಾರೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗದಗ ಆವರಣದಲ್ಲಿ ಸೈಕ್ಲಿಂಗ್ ವೆಲೋಡ್ರಮ್ ನಿರ್ಮಿಸುವದರಿಂದ ಗದಗ ಜಿಲ್ಲೆಯಲ್ಲಿ ಬರುವಂತಹ ಕ್ರೀಡಾ ಪಟುಗಳಿಗೆ ಅಷ್ಟೆ ಅಲ್ಲದೆ ಕರ್ನಾಟಕದಲ್ಲಿ ಇರುವಂತಹ ಸೈಕ್ಲಿಂಗ್ ಕ್ರೀಡಾಪಟುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ವೆಲೋಡ್ರಮ್ ವಿಭಾಗದಲ್ಲಿ ಭಾಗವಹಿಸಲು ರಾಷ್ಟ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅವಕಾಶಗಳು ಒದಗಿ ಬರಲಿವೆ ಹಾಗೂ ವಿಶ್ವವಿದ್ಯಾಲಯದ ಘನತೆಯನ್ನು ಹೆಚ್ಚಿಸಲಿದೆ ಎಂಬ ಅಂಶವನ್ನು ಕಾರ್ಯ ನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮಂಡಿಸುತ್ತ, ಸದರಿ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಸಲ್ಲಿಸಲಾಗಿದೆ.

**ನಿರ್ಣಯ**

*ಮಾನ್ಯ ಕುಲಪತಿಗಳು ಮಾತನಾಡುತ್ತಾ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗದಗ ಆವರಣದಲ್ಲಿ ಸೈಕ್ಲಿಂಗ್ ವೆಲೋಡ್ರಮ್ ನಿರ್ಮಿಸುವದರಿಂದ ಗದಗ ಜಿಲ್ಲೆಯಲ್ಲಿ ಬರುವಂತಹ ಕ್ರೀಡಾ ಪಟುಗಳಿಗೆ ಅಷ್ಟೆ ಅಲ್ಲದೆ ಕರ್ನಾಟಕದಲ್ಲಿ ಇರುವಂತಹ ಸೈಕ್ಲಿಂಗ್ ಕ್ರೀಡಾಪಟುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ವೆಲೋಡ್ರಮ್ ವಿಭಾಗದಲ್ಲಿ ಭಾಗವಹಿಸಲು ರಾಷ್ಟ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅವಕಾಶಗಳು ಒದಗಿ ಬರಲಿವೆ ಹಾಗೂ ವಿಶ್ವವಿದ್ಯಾಲಯದ ಘನತೆಯನ್ನು ಹೆಚ್ಚಿಸಲಿದೆ. ಸೈಕ್ಲಿಂಗ್ ವೆಲೋಡ್ರಮ್ ನಿರ್ಮಿಸುವದರಿಂದ ಕ್ರೀಡಾ ಪಟುಗಳಿಗೆ ರಾಜ್ಯ, ರಾಷ್ಟ್ರ ಹಾಗೂ ಅಂತರ್ ರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಲು ಸಹಾಯವಾಗುತ್ತದೆ ಎಂದು ವಿವರಿಸಿದರು.*

*ಪ್ರೋ. ಷಣ್ಮುಖ, ರವರು ವಿಶ್ವವಿದ್ಯಾಲಯದ ಆವರಣದಲ್ಲಿ ಸೈಕ್ಲಿಂಗ್ ವೆಲೋಡ್ರಮ್ ನಿರ್ಮಿಸುವದರಿಂದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೂ ಇದರ ಸದುಪಯೋಗ ಪಡೆಯಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅನವು ಮಾಡಿಕೊಡಬೇಕು. ಇದರ ಕುರಿತು ಸಂಬಂಧಪಟ್ಟ ಇಲಾಖೆಯವರ ಅನುಮತಿ ಪಡೆದುಕೊಳ್ಳಬಹುದಾಗಿದೆ ಎಂದು ವಿವರಿಸಿದರು. ಇದರ ಜೊತೆಗೆ ಸೈಕ್ಲಿಂಗ್ ವೆಲೋಡ್ರಮ್ ಜಮೀನು ವಿಶ್ವವಿದ್ಯಾಲಯದ ಅಧೀನದಲ್ಲಿಯೇ ಉಳಿಸಿಕೊಳ್ಳಬೇಕು ಎಂದು ತಿಳಿಸಿದರು. ಇದಕ್ಕೆ ಕುಲಪತಿಗಳು*

ಮಾತನಾಡುತ್ತ, ಜಮೀನು ವಿಶ್ವವಿದ್ಯಾಲಯದ ಹೆಸರಿನಲ್ಲಿಯೇ ಇರುತ್ತದೆ, ಅಲ್ಲಿಯ ಸ್ವತ್ತುಗಳನ್ನು ಸಂಬಂಧಪಟ್ಟ ಇಲಾಖೆಯವರು ಸೃಜಿಸುತ್ತಾರೆ ಎಂದು ವಿವರಿಸಿದರು.

ಮೇಲ್ಕಂಡ ಚರ್ಚೆಯೊಂದಿಗೆ, ವಿಶ್ವವಿದ್ಯಾಲಯ, ಗದಗ ಆವರಣದಲ್ಲಿ ಲಭ್ಯವಿರುವ ಜಮೀನಿನ ಪೈಕಿ, ಸೈಕ್ಲಿಂಗ್ ವೆಲೋಡ್ರಮ್ ನಿರ್ಮಿಸಲು ಈಗಾಗಲೇ ಮಂಜೂರು ಮಾಡಿರುವ 5 ಎಕರೆ ಜಮೀನಿಗೆ ಹೆಚ್ಚುವರಿ 5 ಎಕರೆ ಜಮೀನನ್ನು ನಿಗದಿಪಡಿಸಲು ಕಾರ್ಯನಿರ್ವಾಹಕ ಪರಿಷತ್ತು ಅನುಮೋದಿಸಿತು.

**ವಿಷಯ ಸಂಖ್ಯೆ 05: ಅಮೃತ ಗ್ರಾಮ ಪಂಚಾಯಿತಿ ಯೋಜನೆಯಡಿ ಆಯ್ಕೆಯಾದ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಠಾನ ಮಾಡಿರುವ ಕಾರ್ಯಕ್ರಮಗಳ ಮೌಲ್ಯಮಾಪನ ಕೈಗೊಳ್ಳುವ ವಿಷಯವನ್ನು ಪರಿಗಣಿಸುವ ಕುರಿತು.**

**ಪರಾಮರ್ಶನ ಟಿಪ್ಪಣಿ:**

ಭಾರತದ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ದೇಶದೆಲ್ಲಡೆ ವಿಜೃಂಭಣೆಯಿಂದ ಆಚರಿಸುತ್ತಿರುವ ಹಿನ್ನಲೆಯಲ್ಲಿ ದಿನಾಂಕ: 15.08.2021 ರಂದು ಮಾನ್ಯ ಮುಖ್ಯಮಂತ್ರಿಗಳು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಘೋಷಿಸಿದಂತೆ, ಭಾರತದ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿಗಾಗಿ ಸರ್ಕಾರವು ರಾಜ್ಯದ ಆಯ್ದ 750 ಗ್ರಾಮ ಪಂಚಾಯತಿಗಳಲ್ಲಿ ಸಮಗ್ರ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಅಮೃತ ಗ್ರಾಮ ಪಂಚಾಯಿತಿ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯ ಸಚಿವ ಸಂಪುಟವು ಅನುಮೋದನೆಯನ್ನು ನೀಡಿರುತ್ತದೆ.

ಅಮೃತ ಗ್ರಾಮ ಪಂಚಾಯಿತಿ ಯೋಜನೆಯಡಿ ಆಯ್ಕೆಯಾದ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಠಾನ ಮಾಡಿರುವ ಕಾರ್ಯಕ್ರಮಗಳ ಮೌಲ್ಯಮಾಪನ ಕೈಗೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತುತ ಅಮೃತ ಗ್ರಾಮ ಪಂಚಾಯತಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನ ಗೊಳಿಸಲು ಸರ್ಕಾರವು ರಾಜ್ಯದ 5955 ಗ್ರಾಮ ಪಂಚಾಯಿತಿಗಳ ಪೈಕಿ 750 ಗ್ರಾಮ ಪಂಚಾಯಿತಿಗಳಲ್ಲಿ ಅಮೃತ ಗ್ರಾಮ ಪಂಚಾಯಿತಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತೀರ್ಮಾನಿಸಿದಂತೆ, ರಾಜ್ಯದ 31 ಜಿಲ್ಲೆಗಳಿಂದ ಒಟ್ಟು 750 ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಲಾಗಿದೆ.

ಮುಂದುವರೆದು, ಆಯ್ಕೆ ಮಾಡಿರುವ ಗ್ರಾಮ ಪಂಚಾಯಿತಿಗಳಲ್ಲಿ ಈ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕಡ್ಡಾಯವಾಗಿ ನಿರ್ವಹಿಸಬೇಕಾದ ಕಾರ್ಯಕ್ರಮಗಳು ಹಾಗೂ ಶಿಫಾರಸ್ಸು ಮಾಡಿದ ಹೆಚ್ಚುವರಿ ಚಟುವಟಿಕೆಗಳನ್ನು ಸುತ್ತೋಲೆಯಲ್ಲಿ ವಿವರಿಸಲಾಗಿದೆ. ಈ ಹಿನ್ನಲೆಯಲ್ಲಿ ಗ್ರಾಮ ಪಂಚಾಯಿತಿಗಳು ಸಮರ್ಪಕವಾಗಿ ಅಮೃತ ಗ್ರಾಮ ಪಂಚಾಯಿತಿ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಯೋಜನೆಯ ಪ್ರತಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪ್ರಶ್ನಾವಳಿಯನ್ನು ತಯಾರಿಸಿ, ಅಂಕಗಳನ್ನು ನಿಗದಿಪಡಿಸಿ, ಗ್ರಾಮ ಪಂಚಾಯಿತಿಗಳು ಕೈಗೊಂಡ ಪ್ರಗತಿಯನ್ನು ಆಧರಿಸಿ ಮೌಲ್ಯಮಾಪನ ಕೈಗೊಳ್ಳಬೇಕಾಗಿರುತ್ತದೆ.

ಆದ್ದರಿಂದ ಈ ಸಂಬಂಧ ಮೌಲ್ಯಮಾಪನಕ್ಕೆ ಅನುಕೂಲವಾಗುವಂತೆ ನಿಗದಿತ ಕರಡು ನಮೂನೆಯನ್ನು ಸಿದ್ದಪಡಿಸಿಕೊಡುವಂತೆ ಹಾಗೂ ಮೌಲ್ಯಮಾಪನ ಕೈಗೊಳ್ಳುವ ರೂಪು ರೇಷೆಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸರ್ಕಾರದ ಆಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರು ಸೂಚಿಸಿರುತ್ತಾರೆ. ಈ ಕುರಿತು ಕರಡು ನಮೂನೆಯನ್ನು ಸಿದ್ದಪಡಿಸುವಿಕೆ

ಹಾಗೂ ಮೌಲ್ಯಮಾಪನ ರೂಪು ರೇಷೆಗಳ ಬಗ್ಗೆ ಚರ್ಚಿಸಲು ದಿನಾಂಕ 13-05-2022 ರಂದು ಬೆಳಗ್ಗೆ 10.30 ಗಂಟೆಗೆ ವಿಶ್ವವಿದ್ಯಾಲಯದ ಕೌಶ್ಯಲ್ಯ ವಿಕಾಸ ಭವನದಲ್ಲಿ ನಡೆದ ಪ್ರಾಥಮಿಕ ಹಂತದ ಸಭೆಯನ್ನು ನಡೆಸಲಾಯಿತು.

ಮುಂದಿನ ರೂಪ ರೇಷೆಗಳನ್ನು ಇಲಾಖೆ ಅಧಿಕಾರಿಗಳು, ಸಂಬಂಧ ಪಟ್ಟ ಇತರೆ ನೂರಿತ ತಜ್ಞರು ಹಾಗೂ ಇದಕ್ಕೆ ಸಂಬಂಧ ಪಟ್ಟಂತೆ ರಚಿಸಲಾದ ಸಲಹಾ ಸಮಿತಿ ಸದಸ್ಯರುಗಳ ಜೊತೆ ಚರ್ಚಿಸಿ ತಯಾರಿಸಲಾಗುವುದು ಹಾಗೂ ಕ್ರಮ ಕೈಗೊಳ್ಳಲಾಗುವುದು.

ಸದರಿ ವಿಷಯವನ್ನು ಕಾರ್ಯ ನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## ನಿರ್ಣಯ

*ಮಾನ್ಯ ಕುಲಪತಿಗಳು ಸದರಿ ಯೋಜನೆ ಕುರಿತು ವಿವರಿಸುತ್ತಾ, ಸದರಿ ಯೋಜನೆಗೆ ವಿಶ್ವವಿದ್ಯಾಲಯದ ಗೌರವ ಪ್ರಾಧ್ಯಾಪಕರಾದ ಪ್ರೋ.ದೇವೇಂದ್ರ ಬಾಬು, ಪ್ರೊ. ಶಿವಣ್ಣ, ಡಾ.ಪ್ರಕಾಶ ಭಟ್ ಅವರು ಅನುಭವ ಪಡೆದಕೊಳ್ಳಲಾಗುತ್ತಿದ್ದು, ಸದರಿ ಯೋಜನೆಗೆ ವಿಶ್ವವಿದ್ಯಾಲಯದ ಸಿಬ್ಬಂದಿಯಾದ ಗೋವಿಂದರೆಡ್ಡಿ ಇವರನ್ನು ಸಂಯೋಜಕರಾಗಿ ನೇಮಿಸಲಾಗಿದೆ. ಈ ತರಹದ ಸಮೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೋಳ್ಳುವದರಿಂದ ವಿದ್ಯಾರ್ಥಿಗಳಿಗೆ ಬಾಹ್ಯ ಕಲಿಕೆಗೆ ಅನುಭವ ಪಡೆದುಕೊಳ್ಳುತ್ತಾರೆ. ಡಾ.ಪ್ರಕಾಶ ಭಟ್, ಇವರು ಅಮೃತ ಗ್ರಾಮ ಪಂಚಾಯಿತಿ ಯೋಜನೆಯಡಿ ಆಯ್ಕೆಯಾದ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಠಾನ ಮಾಡಿರುವ ಕಾರ್ಯಕ್ರಮಗಳ ಮೌಲ್ಯಮಾಪನ ಕೈಗೊಳ್ಳುವ ಕುರಿತು ಪ್ರಾಥಮಿಕ ಹಂತದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಕುರಿತು ಸಭೆಗೆ ವಿವರಿಸಿದರು.*

*ಪ್ರೋ. ಷಣ್ಮುಖ ರವರು ಅಮೃತ ಗ್ರಾಮ ಪಂಚಾಯಿತಿ ಯೋಜನೆಯಡಿ ಆಯ್ಕೆಯಾದ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಠಾನ ಮಾಡಿರುವ ಕಾರ್ಯಕ್ರಮಗಳ ಮೌಲ್ಯಮಾಪನ ಕೈಗೊಳ್ಳುವ ಯೋಜನೆ ವಿಶ್ವವಿದ್ಯಾಲಯಕ್ಕೆ ದೊರಕಿರುವದಕ್ಕೆ ಸಂತೋಷ ವ್ಯಕ್ತಪಡಿಸಿದರು.*

*ಮೇಲ್ಕಂಡ ಚರ್ಚೆಯೊಂದಿಗೆ,* ಸದರಿ ವಿಷಯವನ್ನು ಕಾರ್ಯ ನಿರ್ವಾಹಕ ಪರಿಷತ್ತು ಪರಿಗಣಿಸಿ, ಅನುಮೋದಿಸಿತು.

**Subject No 06: To consider and approve the following new projects to be initiated under Extension activities of the University.**

**a. Seed Bank**
**b. Farmers Producer Organization**

**Reference Note:**

**a. Seed Bank Establishment.**

ಭಾರತ ಬೀಜ ವೈವಿಧ್ಯತೆಯ ಕಣಜ. ಏಕದಳ, ದ್ವಿದಳ, ಎಣ್ಣೆಕಾಳುಗಳು, ತರಕಾರಿಗಳು, ಹಣ್ಣುಗಳು ಇತ್ಯಾದಿ ಬೆಳೆಗಳಲ್ಲಿ ಅಪಾರ ತಳಿ ವೈವಿಧ್ಯವಿದೆ. ಶತಮಾನಗಳಿಂದ ನಮ್ಮ ಕೃಷಿಕ ಹೆಣ್ಣುಮಕ್ಕಳು ಹಾಗೂ ಕೃಷಿಕರು ಈ ಬೀಜ ಭಂಡಾರವನ್ನು ಉಳಿಸುತ್ತಾ ಬರುತ್ತಿದ್ದಾರೆ. ದಕ್ಷಿಣ ಭಾರತ, ಪಶ್ಚಿಮ ಘಟ್ಟ, ಪೂರ್ವಾಂಚಲ, ಈಶಾನ್ಯ ರಾಜ್ಯ, ಹಿಮಾಲಯದ ತಪ್ಪಲುಗಳವರೆಗೂ ನೂರಾರು ಬಗೆಯ ಬೆಳೆಗಳನ್ನೂ,

ಒಂದೊಂದು ಬೆಳೆಯಲ್ಲಿ ಹಲವು ತಳಿಗಳನ್ನೂ ಕಾಣಬಹುದಾದ ದೇಶ ನಮ್ಮದು. ಆಯಾ ಪ್ರದೇಶದ ಮಣ್ಣು, ಮಳೆ ಪ್ರಮಾಣ, ಹವಾಗುಣಕ್ಕೆ ಹೊಂದಿಕೊಂಡು ಈ ವೈವಿಧ್ಯತೆ ರೂಪುಗೊಂಡಿತ್ತು.

ಕರ್ನಾಟಕವಂತೂ ಬೀಜ ವೈವಿಧ್ಯತೆಯಲ್ಲಿ ಪುಟ್ಟ ಭಾರತವೇ ಆಗಿದೆ. ಉತ್ತರ ಕರ್ನಾಟಕ, ಹಳೇ ಮೈಸೂರು ಹಾಗೂ ಕರಾವಳಿ ಭೂಪ್ರದೇಶಗಳಲ್ಲಿ ಬಗೆ-ಬಗೆಯ ಬೆಳೆ ಮತ್ತು ತಳಿಗಳನ್ನು ಕಾಣಬಹುದು. ಉತ್ತರ ಕರ್ನಾಟಕವು ಜೋಳ, ಸಜ್ಜೆ, ನವಣೆ, ಸಾವಿ ಹಾಗೂ ಇತರೆ ಸಿರಿಧಾನ್ಯ ಹಾಗೂ ತೊಗರಿಗೆ ಹೆಸರಾಗಿದ್ದರೆ, ಹಳೇ ಮೈಸೂರು ಭಾಗವು ರಾಗಿ ವೈವಿಧ್ಯತೆ, ಅವರೆ ಮತ್ತು ಅಕ್ಕಡಿ ಬೇಸಾಯದ ತವರು. ಇನ್ನು ಕರಾವಳಿಯಂತೂ ಭತ್ತದ ತಳಿಗಳಿಗೆ ಹೆಸರುವಾಸಿ. ತರಕಾರಿಗಳನ್ನಂತೂ ಎಲ್ಲ ಭಾಗಗಳಲ್ಲೂ ನೋಡಬಹುದು.

**ಇಂದಿನ ಸ್ಥಿತಿ:**

ಆದರೆ ಮೇಲೆ ಹೇಳಿದ ಅಪಾರ ವೈವಿಧ್ಯ ಇಂದು ಉಳಿದಿದೆಯೇ ಎಂದರೆ, ಉತ್ತರ ಬಹುಶಃ ಇಲ್ಲ ಎಂದೇ ಹೇಳಬೇಕು. ಉದಾಹರಣೆಗೆ ವಾಣಿಜ್ಯ ಬೆಳೆಗಳ ಆಗಮನದಿಂದಾಗಿ ಸಿರಿಧಾನ್ಯ ಬೆಳೆ ಪ್ರದೇಶ ಕುಸಿತ ಕಾಣುತ್ತಿದೆ. ಉಳಿದಂತೆ ಕರ್ನಾಟಕದಲ್ಲಿ ಜೋಳ ಮುಖ್ಯ ಆಹಾರ ಬೆಳೆ. ಕೊಪ್ಪಳ ಭಾಗದಲ್ಲಿ ನವಣೆಗೆ ಹೆಚ್ಚು ಪ್ರಾಮುಖ್ಯ. ಸಿರಿಧಾನ್ಯ ಬೆಳೆಗಳಾದ ಜೋಳ, ಸಜ್ಜೆ ಮತ್ತು ನವಣೆಗಳಲ್ಲಿ ತಳಿ ವೈವಿಧ್ಯತೆ ಉತ್ತರ ಕರ್ನಾಟಕ ಭಾಗದಲ್ಲಿ ಸ್ವಲ್ಪ ಮಟ್ಟಿಗೆ ಜೀವಂತವಾಗಿದೆಯಾದರೂ ಮುಂದಿನ ದಿನಗಳಲ್ಲಿ ತಳಿ ವೈವಿಧ್ಯತೆ ಕಣ್ಮರೆಯಾಗುವ ಆತಂಕವಂತೂ ಇದೆ.

ಆಧುನಿಕ ಕೃಷಿಯ ಸುಳಿಗಾಳಿಗೆ ಸಿಲುಕಿ ಕಣ್ಮರೆಯಾಗುತ್ತಿರುವ ಸಾಂಪ್ರದಾಯಿಕ ಬೆಳೆಗಳಲ್ಲಿ ಸಿರಿಧಾನ್ಯಗಳಿಗೆ ಅಗ್ರಸ್ಥಾನ. ಅವುಗಳ ಹೆಸರೇ ಇಂದು ಎಷ್ಟೋ ಜನಕ್ಕೆ ಅಪರಿಚಿತ. ಉತ್ಪಾದನೆಯ ಜೊತೆಗೆ ಸಿರಿಧಾನ್ಯ ಬೆಳೆಯುವ ಪ್ರದೇಶವೂ ಯತೇಚ್ಚ ಕುಂಠಿತಗೊಂಡಿದೆ.

ಅಕ್ಕಿ ಮತ್ತು ಗೋಧಿಗೆ ಹೋಲಿಸಿದರೆ ಸಿರಿಧಾನ್ಯಗಳಲ್ಲಿ ರುಚಿ ಮತ್ತು ಪೌಷ್ಟಿಕತೆ ದುಪ್ಪಟ್ಟು, ಒಂದು ರೀತಿ ಸಿರಿಧಾನ್ಯಗಳು ಪೌಷ್ಟಿಕತೆಯ ಕಣಜವಿದ್ದ ಹಾಗೆ. ಯಾವ ರೋಗ ರುಜಿನಗಳಿಗೂ ಜಗ್ಗದೆ ಬರಗಾಲದಲ್ಲೂ ಸಹ ರೈತರ ಕೈ ಹಿಡಿಯುವ ಮತ್ತು ಫಲವತ್ತಲ್ಲದ ಭೂಮಿಗಳಲ್ಲು ರೈತರಿಗೆ ಆದಾಯ ತಂದುಕೊಡುವ ಸಿರಿಧಾನ್ಯಗಳು ರೈತರ ಪಾಲಿಗೆ ವರದಾನ. ಈ ಧಾನ್ಯಗಳಲ್ಲಿರುವ ತಳಿ ವೈವಿಧ್ಯತೆಯನ್ನು ಉಳಿಸಿ ಪೋಷಿಸುವುದರ ಜೊತೆಗೆ ಸಿರಿಧಾನ್ಯಗಳನ್ನು ಹೆಚ್ಚು ಪ್ರದೇಶದಲ್ಲಿ ಬೆಳೆಯುವಂತೆ ರೈತ ಸಮುದಾಯಗಳಲ್ಲಿ ಅರಿವು ಮೂಡಿಸುವ ಪ್ರಯತ್ನ ಸಧ್ಯದ ತುರ್ತು.

ಅಪರೂಪದ ತರಕಾರಿ ಮತ್ತು ಹಣ್ಣುಗಳಾದ ಮುಳ್ಳು ಬದನೆ, ಮದನಪಲ್ಲಿ ಟೊಮ್ಯಾಟೋ, ಮಧುಗಿರಿಯ ದಾಳಿಂಬೆ, ದೇವನಹಳ್ಳಿಯ ಚಕ್ಕೋತ, ಅಪ್ಪೆಮಿಡಿ ಮಾವು ಇತ್ಯಾದಿಗಳ ಸ್ಥಿತಿಯೂ ಇದೇ ಆಗಿದೆ.

ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕಣ್ಮರೆಯಾಗುತ್ತಿರುವ ಹಾಗೂ ಅಲ್ಲಲ್ಲಿ ಉಳಿದಿರುವ ತಳಿ ವೈವಿಧ್ಯವನ್ನಾದರೂ ಸಂರಕ್ಷಿಸಿ, ಪ್ರದರ್ಶಿಸಿ, ಅದರ ಜ್ಞಾನವನ್ನು ಪಸರಿಸುವ ಸಲುವಾಗಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು "ಬೀಜ ಬ್ಯಾಂಕ್" (Seed Bank) ಸ್ಥಾಪಿಸುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದೆ.

**ಉದ್ದೇಶಗಳು:**

ಬೀಜ ಬ್ಯಾಂಕ್ ಸ್ಥಾಪನೆಯು ಪ್ರಮುಖವಾಗಿ ಮೂರು ಉದ್ದೇಶಗಳನ್ನು ಹೊಂದಿದೆ;

1. ರಾಜ್ಯದ ಬೇರೆ-ಬೇರೆ ಭಾಗಗಳಿಂದ ದೇಸಿ ತಳಿಗಳು ಮತ್ತು ಅವುಗಳ ಮಾಹಿತಿಯನ್ನು ಸಂಗ್ರಹಿಸಿ ವಿಶ್ವವಿದ್ಯಾಲಯದಲ್ಲಿ ಪ್ರದೇಶವಾರು, ಬೆಳೆವಾರು ವ್ಯವಸ್ಥಿತವಾಗಿ ಪ್ರದರ್ಶಿಸುವುದು.
2. ವಿಶ್ವವಿದ್ಯಾಲಯದ ಕ್ಯಾಂಪಸ್ಸಿನಲ್ಲಿ ಸಣ್ಣ ಪ್ರಮಾಣದಲ್ಲಿ ತಳಿಗಳ-ಅದರಲ್ಲಿಯೂ ಅಪರೂಪದ ತಳಿಗಳ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು. ಇದಕ್ಕಾಗಿ ವಿದ್ಯಾರ್ಥಿಗಳನ್ನೂ ಒಳಗೊಳ್ಳುವುದು. ಆಸಕ್ತ ರೈತರಿಗೆ ಪ್ರಾಯೋಗಿಕವಾಗಿ ಸ್ವಲ್ಪಪ್ರಮಾಣದ ಬೀಜ ವಿತರಣೆ.
3. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಮತ್ತು ಆಸಕ್ತರಿಗೆ ದೇಸಿ ತಳಿ ವೈವಿಧ್ಯತೆಯ ಮಹತ್ವ, ಅವುಗಳನ್ನು ಸಂರಕ್ಷಿಸಬೇಕಾದ ಅಗತ್ಯ, ಬೆಳೆಯುವ ವಿಧಾನ, ಪೌಷ್ಟಿಕತೆ, ಆಹಾರ ಪದ್ಧತಿಗಳು, ಕೀಟ-ರೋಗ ನಿಯಂತ್ರಣ ಮುಂತಾದ ವಿಷಯಗಳ ಬಗ್ಗೆ ತರಬೇತಿ ನೀಡುವುದು.

ಮೇಲ್ಕಂಡ ಉದ್ದೇಶಗಳ ಜೊತೆಗೆ ದೇಸಿ ತಳಿಗಳ ಬಗ್ಗೆ ಕಾಲ-ಕಾಲಕ್ಕೆ ತರಬೇತಿ ಕೈಪಿಡಿಗಳು, ವಾರ್ತಾಪತ್ರ ಹಾಗೂ ಪುಸ್ತಕಗಳನ್ನು ಪ್ರಕಟಿಸುವುದು, ಕಾರ್ಯಗಾರ / ತರಬೇತಿಗಳನ್ನು ಹಮ್ಮಿಕೊಳ್ಳುವುದು, ಇತ್ಯಾದಿ. ಸಹ ಮುಖ್ಯ ಉದ್ದೇಶವಾಗಿದೆ.

**b. Farmers Producer Organization**

The main aim of Farmer Producers Organisation is to ensure better income for producers through an organisation of their own. Small producers do not have the volume individually (both inputs and produces) to get the benefit of economies of scale. Besides in agricultural marketing, there is a long chain of intermediaries who very often work non transparently leading to situation where the producers receives only a small part of the value that the ultimate consumer pays. Through aggregation, the primary producers can avail the benefit of economies of scale. They will also have a better

bargaining power Vis-as-Vis the bulk buyers of Producers and bulk suppliers of inputs.

**Farmer Producers Organisations (FPOs):**

It is one type of producer organisation where the members are farmers. Small Farmers Agri-business Consortium (SFAC) is provides support for promotion of FPOs. Producers organization is a generic name for an organisation producers of any produce for example agriculture, non-farm products, Artisan products etc.

A provision has been made under Section 4(2) (XXV) of the Karnataka State Rural Development and Panchayat Raj University Act, 2016 for the promotion of self help groups, farmer producers groups, Agribusiness centers, Community credit Societies and ensure access to Government projects, programmes and subsidizers through formal financial institutions for adopting newer technologies towards achieving inclusive growth.

University will promote FPOs with the help of other Central/State agencies or using own resources out of goodwill with a noble objective of socio-economic development of farmers. However, as a facilitating agency University seek financial and other support from NABARD/SFAC/WDD (Watershed Development Department) /Government departments.

Further, KSRDPR University started the process of organising FPOs in surrounding villages like Nagavi, Kalasapur and Beladhadi with following objectives:

- To help the small and marginal formers for their socio-economic development.
- To establish FPO as a demonstration unit to take up studies by students of PG/UG programmes.
- To make use of this organization for Capacity building of students to take up responsibilities as CEO in coming days.

University has conducted the preliminary survey of existing FPOs in and around villages, facilitating agencies, functionalities and performance of these existing FPOs

It is proposed to start FPO under guidance and supervision of KSRDPR University in Nagavi, Kalasapura and Beladhadi village put together with multi-crop coverage mainly Maize, Bengal gram, Green gram and groundnut.

Preliminary meeting with interested farmers is conducted at the individual village level. Also conducted one day farmers contact program of all three villages at University level. Gram Sabha meetings have been scheduled and the process of organizing FPO, would be taken forward.

In the mean time we have requested NABARD/WDD/Centre for Excellence for FPO/Agriculture Department to consider our University as a "Resource Institution" and also a Nodal Agency to impart training, technical support for effective performance of FPOs

The proposal is prepared University to act as a facilitating institution. The required financial support for organizing FPO will be extended by NABARD/WDD/ Centre for Excellence -FPO, otherwise the University may have to utilize its budgetary recourses as Goodwill for socio-economic development of farmers and also to use as a demonstration unit for study of University students.

The aforesaid matters are placed before the Executive Council for kind consideration and approval.

### ನಿರ್ಣಯ

ಮಾನ್ಯ ಕುಲಪತಿಗಳು ಇದರ ಕುರಿತು ಮಾತನಾಡುತ್ತ, ಇವುಗಳು ವಿಶ್ವವಿದ್ಯಾಲಯದ ವಿಸ್ತರಣಾ ಚಟುವಟಿಕೆಗಳ ಭಾಗವಾಗಿದ್ದು, ಬೀಜಗಳ ಬ್ಯಾಂಕಗೆ "ಕಣಜ" ಎಂದು ಹೆಸರು ಸೂಚಿಸಲಾಗಿದ್ದು ಇದು ಒಂದು ಒಳ್ಳಯ ಕಾರ್ಯಕ್ರಮವಾಗಲಿದ್ದು, ಇದರಿಂದ ದ್ವಿದಳ ದಾನ್ಯ ಮತ್ತು ಸಿರಿ ಧಾನ್ಯಗಳ ಕೃಷಿಗೆ ಉಪಯೋಗವಾಗವುದು. ಇದರ ಜೋತೆ ಮಣ್ಣು ಪರೀಕ್ಷೆ ಕೂಡ ಮಾಡಲಾಗುವುದು. ಈ ಯೋಜನೆಗೆ ಸಂಪನ್ಮೂಲ ವ್ಯಕ್ತಿಯಾಗಿ ಸದರಿ ಕ್ಷೇತ್ರದಲ್ಲಿ ಹೆಸರು ಮಾಡಿರುವ ಶ್ರೀ ಮಲ್ಲಿಕಾರ್ಜುನ ಹೊಸಪಾಳ್ಯ, ಇವರು ಸಲಹೆಗಾರರಾಗಿ (ಕನ್ಸಲಟಂಟ್) ಕಾರ್ಯನಿರ್ವಹಿಸಲು ಆಸಕ್ತಿ ವ್ಯಕ್ತಪಡಿಸಿರುತ್ತಾರೆ ಎಂಬ ವಿಷಯವನ್ನು ತಿಳಿಸಿದರು. ಇದಕ್ಕೆ ಸದಸ್ಯರು, ಶ್ರೀ ಮಲ್ಲಿಕಾರ್ಜುನ ಹೊಸಪಾಳ್ಯ ಇವರು ಸದರಿ ಕ್ಷೇತ್ರದಲ್ಲಿ ಒಳ್ಳಯ ಕಾರ್ಯ ಮಾಡಿರುವ ಅನುಭವವಿರುವುದರಿಂದ, ಸೂಕ್ತ ಕರಾರುಗಳನ್ನು ಕುಲಪತಿಗಳ ಹಂತದಲ್ಲಿ ಮಾಡಿಕೊಂಡು, ಅವರನ್ನು ಸಲಹೆಗಾರರಾಗಿ ನೇಮಿಸಿ ಅವರ ಸೇವೆಯನ್ನು ಪಡೆಯಲು ಅನುಮೋದಿಸಿದರು. ಇದಕ್ಕೆ ಕುಲಪತಿಗಳು ಸಹಮತಿಸಿದರು. ಕಳೆದ ವರ್ಷ ವಿಶಿಷ್ಟವಾದ ತಳಿಯ ಶೇಂಗಾ ಬೀಜಗಳನ್ನು ರೈತರಿಗೆ

ವಿತರಿಸಿದ್ದು. ಈ ವರ್ಷ ಈರುಳ್ಳಿ ಹಾಗೂ ಇತರೆ ಬೀಜಗಳನ್ನು ವಿತರಿಸುವ ಕುರಿತು ಕ್ರಮಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಪ್ರೊ. ವೀರಭದ್ರಯ್ಯ ಇವರು ಮಾತನಾಡುತ್ತ, ಬೀಜಗಳ ಶೇಖರಣೆ ಮಾಡಲಾಗುವ ವಿಷಯಗಳನ್ನು ಕೇಳಿದರು. ಅದಕ್ಕೆ ಕುಲಪತಿಗಳು, ಇದರಲ್ಲಿ ಪರಿಣಿತಿ ಹೊಂದಿರುವ ಸರ್ಕಾರಿ/ ಅರೆ ಸರ್ಕಾರಿ/ ಸರ್ಕಾರೇತರ/ ಸ್ವಸಹಾಯ ಸಂಸ್ಥಗಳ/ ವ್ಯಕ್ತಿಗಳ ಮುಖಾಂತರ ವಿವಿಧ ಜಾತಿಯ ಬೀಜಗಳನ್ನು ಶೇಖರಿಲಾಗುವುದು ಎಂದು ವಿವರಿಸಿದರು.

ಮುಂದುವರೆದು, ಜೂನ 5 ನೇ ತಾರಿಖರಂದು ನಡೆಯುವ ವಿಶ್ವ ಪರಿಸರ ದಿನದಂದು ವಿಶ್ವವಿದ್ಯಾಲಯದ ಆವರಣದಲ್ಲಿ ಸುಮಾರು 2500 ವಿವಿದ ಜಾತಿಯ ಗಿಡಗಳನ್ನು ನೆಡಲು ಉದ್ದೇಶಿಸಲಾಗಿದೆ ಎಂದು ವಿವರಿಸಿದರು.

ಶ್ರೀ. ವಿಶ್ವೇಶ್ವರ್ ಸಜ್ಜನ ಮಾತನಾಡುತ್ತಾ, ಉತ್ತರ ಕರ್ನಾಟಕ ಭಾಗದಲ್ಲಿ ರೈತರ ಪರಿಸ್ಥಿತಿ ದಯನೀಯವಾಗಿದ್ದು, ಈ ಭಾಗದಲ್ಲಿ ಕೃಷಿ ವೆಚ್ಚದಾಯಕ ವ್ಯವಸಾಯವಾಗಿದೆ. ಈ ಕೃಷಿಯನ್ನು ವೆಚ್ಚ ರಹಿತ ವ್ಯವಸಾಯ ಮಾಡಲು ಮರ ಆಧಾರಿತ ಕೃಷಿಗೆ ಒತ್ತು ನೀಡಬೇಕಾಗಿದೆ. ಉದಾರಣೆಗೆ ಭೇಲದ ಹಣ್ಣು ಔಷಧಿ ಮರವಾಗಿದ್ದು, ಈ ಮರ ವಿನಾಶದ ಅಂಚಿನಲ್ಲಿದೆ. ವಿಶ್ವವಿದ್ಯಾಲಯ ಮರ ಆಧಾರಿತ ಹಾಗೂ ಗೆಡ್ಡೆ ಗೆಣಸುಗಳ ಮಾದರಿ ಕೃಷಿ ಜಾರಿಗೆ ತರಬೇಕು ಎಂದು ವಿವರಿಸಿದರು.

ಮಾನ್ಯ ಕುಲಪತಿಗಳು ರೈತ ಉತ್ಪಾದಕರ ಸಂಘ ಗಳ ಕುರಿತು ವಿವರಿಸುತ್ತ, ವಿಶ್ವವಿದ್ಯಾಲಯದ ಹತ್ತಿರವಿರುವ ನಾಗಾವಿ, ಕಳಾಸಾಪುರ, ಬೆಳದಡಿ ಗ್ರಾಮಗಳಲ್ಲಿ ರೈತ ಉತ್ಪಾದಕರ ಸಂಘ ಸ್ಥಾಪನೆಗೆ ಒತ್ತುಕೊಡಲಾಗುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ, ವಿಶ್ವವಿದ್ಯಾಲಯವು ರೈತ ಉತ್ಪಾದಕರ ಸಂಘ ಗಳ ಸ್ಥಾಪನೆಗೆ ತರಬೇತಿ, ತೆಗೆದುಕೊಳ್ಳಬೇಕಾದ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ಇತ್ಯಾದಿ ವಿಷಯಗಳ ಕುರಿತು ಗಮನವಹಿಸಲಾಗುವುದು ಎಂದು ಸಭೆಗೆ ವಿವರಿಸಿದರು. ಪ್ರೊ. ವೀರಭದ್ರಯ್ಯ ಇವರು, ಯಾವ ರೀತಿಯ ರೈತ ಉತ್ಪಾದಕರ ಸಂಘ ಸ್ಥಾಪನೆ ಮಾಡಲಗುತ್ತಿದೆ ಎಂದು ಕೇಳಿದರು. ಅದಕ್ಕೆ ಡಾ. ಪ್ರಕಾಶ ಭಟ್ ಇವರು, ಬಹುಬೆಳೆ ರೈತ ಉತ್ಪಾದಕರ ಸಂಘ ಸ್ಥಾಪನೆ ಮಾಡುವ ಯೋಜನೆ ರೂಪಿಸಲಾಗುತ್ತಿದೆ ಎಂದು ವಿವರಿಸಿದರು.

ಮೇಲ್ಕಂಡ ಚರ್ಚೆಯೊಂದಿಗೆ, ಸದರಿ ವಿಷಯವನ್ನು ಕಾರ್ಯ ನಿರ್ವಾಹಕ ಪರಿಷತ್ತು ಪರಿಗಣಿಸಿ, ಅನುಮೋದಿಸಿತು.

**Subject No 07: To consider and ratify of the inclusion of Sri. Dattatreya K. Deshapande, Advocate, Gadag, in the Panel of advocates for the University.**

**Reference Note:**

The Karnataka State Rural Development and Panchayat Raj University, Gadag has been established under KSRDPR University Act, 2016. The University has started its activities from academic year 2017-18. It is felt necessary to have a Legal Advisor to provide Legal counsel to mediate disputes,

oversee a contract signing or advice on legal matters pertaining to the University.

The KSRDPRU already has few Advocates in the list of Panel of Advocates. Request letter of Sri Mahantesh I. Shigli, Panel of Advocate, to relive from the panel of advocates due to his appointment as the President of District Consumers' Disputes Redressal Commission may be please be perused (Annexure 1).

Further, Sri. Dattatrey Deshapande, Advocate of Gadag, is a qualified legal professional. He is an expert in Civil, Labour, Banking and Insurance Sector, Trained Mediator (BMC) and practicing since 1985, He served as panel of advocate in various Nationalized Banks, Co-operative Banks, KSFC, Karnataka University Dharwad, Gadag-Betigeri Municipality and other Government and Non Government Institutions. He has shown interest on serving for the University and submitted the request letter along with the Bio-data to include his name in the University's list of Panel of Advocates.

The letter of Sri. Dattatray K. Deshapande dated: 21-03-2022 placed in the annexure 2 may please be perused. As per sec 28 (15) of KSRDPRU Act, Executive Council has to arrange for the conduct of litigation by or against the University, he may be empanelled in the panel of Advocates for KSRDPRU, Gadag to offer legal opinion and on behalf of KSRDPRU, Gadag.

Hence, the proposal is placed before the Executive Council for kind consideration and ratification.

### ನಿರ್ಣಯ

ಸದರಿ ವಿಷಯದ ಕುರಿತು ಕುಲಪತಿಗಳು ವಿವರಿಸಿದರು. ಈಗಾಗಲೇ ವಿಶ್ವವಿದ್ಯಾಲಯದಲ್ಲಿ ಕೆಲವು ಅಡ್ವೋಕೆಟ್ ರವರ ಸೇವೆ ಪಡೆಉಲಾಗುತ್ತಿದೆ. ಶ್ರೀ ಮಹಾಂತೇಶ ಐ ಶಿಗ್ಲಿ, ಇವರು ಬೇರೆ ಕಡೆ ನೇಮಕಾತಿ ಹೊಂದಿದರ ಪ್ರಯುಕ್ತ ತೆರವಾದ ಸ್ಥಾನದಲ್ಲಿ, ಅನುಭವಿಗಳಾದ ಶ್ರೀ ದತ್ತಾತ್ರೇಯ ದೇಶಪಾಂಡೆ, ವಕೀಲರು ಅವರನ್ನು ಪ್ಯನಲ್ ಆಫ್ ಅಡ್ವಕೇಟ್ಸ್ ನಲ್ಲಿ ಸೇರ್ಪಡೆಗೊಳಿಸಲಾಗಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಶ್ರೀ ಸುಧೀರ ಘೋರ್ಪಡೆ ಇವರು, ಶ್ರೀ ದತ್ತಾತ್ರೇಯ ದೇಶಪಾಂಡೆ ಇವರು ಹಲವು ವಿಷಯಗಳಲ್ಲಿ ಪರಿಣಿತಿ ಹೊಂದಿರುವುದರಿಂದ ಇವರ ನೇಮಕಾತಿ ಅನುಮೋದಿಸಬಹುದಾಗಿದೆ ಎಂದು ಸಹಮತಿ ವ್ಯಕ್ತಪಡಿಸಿದರು ಹಾಗೂ ಉಳಿದ ಸದಸ್ಯರು ಒಪ್ಪಿಗೆ ಸೂಚಿಸಿದರು.

ಸದರಿ ಚರ್ಚೆಯೊಂದಿಗೆ, ಈ ವಿಷಯವನ್ನು ಅನುಸಮರ್ಥಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**Subject No 08: To consider the Engagement of Director (I/c) to the Centre for Research Innovation and Evaluation in accordance with the sanctioned posts under prescribed regulations.**

**Reference Note:**

The Karnataka State Rural Development and Panchayat Raj University has been established in Gadag and started its activities from the Academic year 2017-18. The University has two Centers of learning and Five Schools of Study. The objective emphasis of the University is on Training of the Panchayat Raj system members and officials of the Rural Development and Panchayat Raj Department and to prepare the right human resourse required for integrated Rural Development. Hence, we are in the process of recruiting two Directors of Centers as per sanctioned posts accepted by the Government of Karnataka vide letter No ಗ್ರಾಅಪ 02 ಜಿಪಸ 2017, ದಿನಾಂಕ 21-06-2017. In the mean time, experienced and Senior Professors may be engaged to initiate and guide on Training and Research activities to full fill the objectives of the University.

Hence the University appointed Dr. Prakash Bhat, Former CEO SCOPE Dharwad, as a Director In-Charge of Center for Research, Innovation and Evolution under the Karnataka State Rural Development and Panchayat Raj University Appointment, Powers, Functions and Conditions of Service of the Director of Research, Innovation and Evaluation Regulations, 2019, to take up the related activities expertise and background through the Centre for Research, Innovation and Evolution

This matter is placed before the Executive Council for kind consideration and ratification.

*ನಿರ್ಣಯ*

*ಸದರಿ ವಿಷಯದ ಕುರಿತು ಕುಲಸಚಿವರು ಮತ್ತು ಕುಲಪತಿಗಳು, ಡಾ. ಪ್ರಕಾಶ ಭಟ್ ಅವರ ಈ ವರೆಗಿನ ವಿಶ್ವವಿದ್ಯಾಲಯದ ಬೆಳವಣಿಗೆಗಾಗಿ ಸೇವೆ ಮತ್ತು ಅವರ ಕಾರ್ಯಕ್ಷಮತೆಯನ್ನು ಪರಿಗಣಿಸಿ ವಿಶ್ವವಿದ್ಯಾಲಯದ ವಿಸಿಟಿಂಗ್ ಪ್ರೊಫೆಸರ್ ಆಗಿರುವ ಇವರನ್ನು ನಿರ್ದೇಶಕರು (ಪ್ರಭಾರ), ಸಂಶೋಧನೆ,ಅನ್ವೇಷಣೆ ಮತ್ತು ಮೌಲ್ಯಮಾಪನ ಕೇಂದ್ರಕ್ಕೆ ನೇಮಕ ಮಾಡಿರುವ ಕುರಿತು*

ಅನುಸಮರ್ಥನೆಯನ್ನು ಕೋರಿದರು. ಪ್ರಸ್ತುತ ಖಾಯಂ ನೇಮಕಾತಿ ಆಗದೇ ಇರುವುದರಿಂದ ಸದರಿ ನೇಮಕಾತಿಯನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**Subject No 09: To consider the Engagement of Director (I/c) to the Centre for Training, Publication & Supervision in accordance with the sanctioned posts under prescribed regulations.**

**Reference Note:**

The Karnataka State Rural Development and Panchayat Raj University has been established in Gadag and started its activities from the Academic year 2017-18. The University has two Centers of learning and Five Schools of Study. The objective emphasis of the University is on Training of the Panchayat Raj system members and officials of the Rural Development and Panchayat Raj Department and to prepare the right human resourse required for integrated Rural Development. Hence, we are in the process of recruiting two Directors of Centers as per sanctioned post approved and accepted by the Government of Karnataka vide letter No ಗ್ರಾಅಪ 02 ಜಿಪಸ 2017, ದಿನಾಂಕ 21-06-2017. In the mean time, experienced and Senior Professors may be engaged to initiate and guide on Training and Research activities to full fill the objectives of the University.

Hence the University is appointed Dr. Sivanna N, Retd Professor, Institute for Social and Economic Change, as Director In-Charge of Centre for Training, Publication and Supervision, under the Karnataka State Rural Development and Panchayat Raj University Appointment, Powers, Functions and Conditions of Service of the Director of Training, Publication and Supervision Regulation, 2019, to take up the related activities expertise and background through the Centre for Training, Publication and Supervision .

This matter is placed before the Executive Council for kind consideration and ratification.

**ನಿರ್ಣಯ**

ಸದರಿ ವಿಷಯದ ಕುರಿತು ಕುಲಸಚಿವರು ಮತ್ತು ಕುಲಪತಿಗಳು, ಪ್ರೋ. ಎನ್.ಶಿವಣ್ಣ ಅವರ ಈ ವರೆಗಿನ ವಿಶ್ವವಿದ್ಯಾಲಯದ ಬೆಳವಣಿಗೆಗಾಗಿ ಅವರ ಸೇವೆ ಮತ್ತು ಕಾರ್ಯಕ್ಷಮತೆಯನ್ನು ಪರಿಗಣಿಸಿ ವಿಶ್ವವಿದ್ಯಾಲಯದ ಗೌರವ ಪ್ರಾಧ್ಯಾಪಕರಾಗಿರುವ ಇವರನ್ನು ನಿರ್ದೇಶಕರು(ಪ್ರಭಾರ), ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣಾ

ಕೇಂದ್ರಕ್ಕೆ ನೇಮಕ ಮಾಡಿರುವ ಕುರಿತು ಅನುಸಮರ್ಥನೆಯನ್ನು ಕೋರಿದರು. ಪ್ರಸ್ತುತ ಖಾಯಂ ನೇಮಕಾತಿ ಆಗದೇ ಇರುವುದರಿಂದ ಸದರಿ ನೇಮಕಾತಿಯನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**Subject No 10: Any other matter with the permission of Chairperson.**

**ಟೆಬಲ್ ಅಜೆಂಡಾ ಸಂಖ್ಯೆ 1:** 2021-22ನೇ ಸಾಲಿಗೆ ವಿಶ್ವವಿದ್ಯಾಲಯಕ್ಕೆ ಲೆಕ್ಕಶೀರ್ಷಿಕೆವಾರು ನಿಗದಿಪಡಿಸಿದ ಬಿಡುಗಡೆಯಾದ / ವೆಚ್ಚಗಳ ವಿವರಗಳನ್ನು ಹಾಗೂ 2022-23ನೇ ಸಾಲಿಗೆ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನಗಳ ವಿವರ.

**ಪರಾಮರ್ಶನ ಟಿಪ್ಪಣಿ:**

2021-22ನೇ ಸಾಲಿಗೆ ವಿಶ್ವವಿದ್ಯಾಲಯಕ್ಕೆ ಲೆಕ್ಕ ಶೀರ್ಷಿಕೆವಾರು ನಿಗದಿಪಡಿಸಿದ /ಬಿಡುಗಡೆಯಾದ / ವೆಚ್ಚಗಳ ವಿವರಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮುಂದೆ ಮಂಡಿಸಲಾಗಿದೆ.

**ನಿರ್ಣಯ**

ಮಾನ್ಯ ಹಣಕಾಸು ಅಧಿಕಾರಿಗಳು ವಿಶ್ವವಿದ್ಯಾಲಯದಲ್ಲಿನ ವಿವಿಧ ಲೆಕ್ಕಶೀರ್ಷಿಕೆಗಳ ಕುರಿತು ವಿವರಿಸಿದರು. ಪ್ರಸ್ತುತ ವರ್ಷದ ಆಯವ್ಯಯದಲ್ಲಿ ನಿಗದಿಯಾದ ಅನುದಾನ ಮತ್ತು ಹಿಂದಿನ ವರ್ಷದ ಅನುದಾನ ಮತ್ತು ವೆಚ್ಚಗಳ ಕುರಿತು ಸಭೆಗೆ ವಿಸ್ತೃತವಾಗಿ ವಿವರಿಸಿದರು. ಜೊತೆಗೆ ವಾರ್ಷಿಕ ಲೆಕ್ಕಪತ್ರಗಳ ವಿವರ ಹಾಗೂ ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಬ್ಯಾಂಕ್ ಖಾತೆಗಳ ವಿವರ, ಸರ್ಕಾರದಿಂದ ಮಂಜೂರಾದ ಅನುದಾನ, ಸ್ವಂತ ಸಂಪನ್ಮೂಲಗಳ ವಿವರಗಳನ್ನು ಸಭೆಯ ಮುಂದೆ ಮಂಡಿಸಿದರು. ಪ್ರಸ್ತುತ ಸಾಲಿನಲ್ಲಿ ವೇತನ ಮತ್ತು ಅವಶ್ಯಕವಾದ ವೆಚ್ಚಗಳಿಗೆ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದ್ದು, ಪ್ರಸಕ್ತ ಆರ್ಥಿಕ ಸಾಲಿನ ಅನುದಾನ ಮರುಹಂಚಿಕೆ, ಆಯವ್ಯಯ ಸಿದ್ಧಗೊಳಿಸಿ ಕ್ರಿಯಾಯೋಜನೆ ರಚಿಸಿ ಮುಂದಿನ ಹಣಕಾಸು ಸಮಿತಿಯಲ್ಲಿ ಅವುಗಳನ್ನು ಮಂಡಿಸಿ ನಂತರ ಕಾರ್ಯನಿರ್ವಾಹಕ ಪರಿಷತ್ತಿನ ಅನುಮೋದನೆಗೆ ಮಂಡಿಸಲಾಗುವುದಾಗಿ ವಿವರಿಸಿದರು. ಮಾನ್ಯ ಕುಲಪತಿಗಳು ಮಾತನಾಡುತ್ತ ಈ ಹಿಂದಿನ ಹಣಕಾಸು ಸಮಿತಿ ಮತ್ತು ಸರ್ಕಾರದ ಹಣಕಾಸು ಇಲಾಖೆಯ ಅಧಿಕಾರಿಗಳು, ವಿಶ್ವವಿದ್ಯಾಲಯದ ಹಣಕಾಸು ವಿಭಾಗ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸುತ್ತಿದ್ದು ದಾಖಲಾತಿಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿರುವುದನ್ನು ಕಂಡು ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ಹಣಕಾಸು ಅಧಿಕಾರಿಗಳಿಗೆ ಮಾನ್ಯ ಕುಲಪತಿಗಳು ಅಭಿನಂದನೆ ಸಲ್ಲಿಸಿದರು. ಮಾನ್ಯ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಾದ ಪ್ರೊ.ವೀರಭದ್ರಯ್ಯ ಅವರು ಕೂಡ ಹಣಕಾಸು ಅಧಿಕಾರಿಗಳಿಗೆ ಮತ್ತು ಹಣಕಾಸು ವಿಭಾಗಕ್ಕೆ ಅಭಿನಂದನೆ ಸಲ್ಲಿಸಿದರು.

ಮಾನ್ಯ ಹಣಕಾಸು ಅಧಿಕಾರಿಗಳು ಈ ಅತ್ಯುತ್ತಮ ಕೆಲಸ ಕಾರ್ಯ ನಿರ್ವಹಿಸಲು ಸಲಹೆ ಸಹಕಾರ ನೀಡಿದ ಮಾನ್ಯ ಕುಪತಿಗಳು, ಕುಲಸಚಿವರು ಹಾಗೂ ಸಿಬ್ಬಂದಿಗಳಿಗೆ ಧನ್ಯವಾದ ತಿಳಿಸಿದರು. ಸದರಿ ಚರ್ಚೆಯೊಂದಿಗೆ, ಈ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ಟೇಬಲ್ ಅಜೆಂಡಾ 2– ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಪದವಿ ಕಾರ್ಯಕ್ರಮಗಳ (UG Programme) ಪರೀಕ್ಷಾ ಹಾಗೂ ಮೌಲ್ಯಮಾಪನ ಕಾರ್ಯಗಳನ್ನು ನಿರ್ವಹಿಸುವ ಉಪನ್ಯಾಸಕರಿಗೆ ಮತ್ತು ಸಿಬ್ಬಂದಿಗಳಿಗೆ ಸಂಭಾವನೆ ಮತ್ತು ವಿವಿಧ ಭತ್ಯೆಗಳ ದರಗಳನ್ನು ನಿಗದಿಪಡಿಸುವ ಕುರಿತು.**

**ಪರಾಮರ್ಷನ ಟಿಪ್ಪಣಿ:–**

ಪ್ರಸ್ತುತ ವಿಶ್ವವಿದ್ಯಾಲಯದ ಅಧಿಸೂಚನೆ ಕ.ರಾ.ಗ್ರಾ.ಅ.ಪಂ.ರಾ.ವಿ: ಗದಗ: ಸಿ.ಸಂ.ಭ.ದ: 2017–18 ದಿನಾಂಕ 23–01–2018 ರ ಪ್ರಕಾರ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ ಪರೀಕ್ಷೆಗಳಲ್ಲಿ ಹಾಗೂ ಮೌಲ್ಯಮಾಪನ ಕಾರ್ಯಗಳಿಗೆ ಸಂಬಂಧ ಪಟ್ಟಂತೆ ಕಾರ್ಯನಿರ್ವಹಿಸುವ ಸಿಬ್ಬಂದಿ ಹಾಗೂ ಉಪನ್ಯಾಸಕರಿಗೆ ಸಂಭಾವನೆ ಮತ್ತು ವಿವಿಧ ಭತ್ಯೆಗಳ ದರಗಳನ್ನು ನಿಗದಿ ಪಡಿಸಲಾಗಿದೆ.

ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ವರ್ಷ 2021–22 ರಿಂದ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ ಐದು ಸ್ನಾತಕ(ಪದವಿ) ಕಾರ್ಯಕ್ರಮಗಳನ್ನು ಆರಂಭಿಸಿದ್ದು ಅವುಗಳ ಪ್ರಥಮ ಸೆಮಿಸ್ಟರ್ ಪರೀಕ್ಷೆಗಳು ಮಾರ್ಚ್ ಮತ್ತು ಎಪ್ರಿಲ್ ತಿಂಗಳುಗಳಲ್ಲಿ ಜರುಗಿರುತ್ತವೆ. ಮುಂದುವರೆದು, ಉಪನ್ಯಾಸಕರಿಗೆ ಹಾಗೂ ಸಿಬ್ಬಂದಿಗಳಿಗೆ ಸಂಭಾವನೆ ಮತ್ತು ವಿವಿಧ ಭತ್ಯೆಗಳ ದರಗಳನ್ನು ನಿಗದಿಪಡಿಸಲು ಒಂದು ಸಲಹಾ ಸಮಿತಿ ರಚಿಸಿ ಆ ಸಲಹಾ ಸಮಿತಿ ನೀಡುವ ವರದಿಯನ್ನು ಕಾರ್ಯನಿರ್ವಾಹಕ ಪರಿಷತ್‌ನ ಮುಂದಿನ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗುವುದು.

ಮುಂದುವರೆದು ಈಗಾಗಲೇ ಪ್ರಥಮ ಸಮೆಸ್ಟರ್‌ನ ಸ್ನಾತಕ ಪದವಿ ಪರೀಕ್ಷೆಗಳು ಜರುಗಿದ್ದು, ಇದಕ್ಕೆ ಸಂಬಂಧಪಟ್ಟಂತೆ ಉಪನ್ಯಾಸಕರಿಗೆ ಮತ್ತು ಪರೀಕ್ಷಾ ಸಿಬ್ಬಂದಿಗಳಿಗೆ ಸಂಭಾವನೆ ಮತ್ತು ವಿವಿಧ ಭತ್ಯೆಗಳ ನೀಡಬೇಕಾಗಿರುವುದರಿಂದ, ಇವರುಗಳಿಗೆ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ನೀಡುವ ಸಂಭಾವನೆಯನ್ನು ಮತ್ತು ವಿವಿಧ ಭತ್ಯೆಗಳನ್ನು ನೀಡಬೇಕಾಗಿರುತ್ತದೆ.

ಸದರಿ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್‌ನ ಪರಿಗಣನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

**ನಿರ್ಣಯ**

ಮಾನ್ಯ ಹಣಕಾಸು ಅಧಿಕಾರಿಗಳು ಸದರಿ ವಿಷಯದ ಕುರಿತು ಸಭೆಗೆ ವಿವರಿಸಿದರು. ಮತ್ತು ಮಾನ್ಯ ಕುಲಪತಿಗಳು ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಾದ ಪ್ರೊ.ಶಣ್ಮುಖ ಇವರ ನೇತೃತ್ವದಲ್ಲಿ ಒಂದು ಸಲಹಾ ಸಮಿತಿ ರಚಿಸಿ ವಿಶ್ವವಿದ್ಯಾಲಯದ ಪದವಿ ಕಾರ್ಯಕ್ರಮಗಳ (UG Programme) ಪರೀಕ್ಷಾ ಹಾಗೂ ಮೌಲ್ಯಮಾಪನ ಕಾರ್ಯಗಳನ್ನು ನಿರ್ವಹಿಸುವ ಉಪನ್ಯಾಸಕರಿಗೆ ಮತ್ತು ಸಿಬ್ಬಂದಿಗಳಿಗೆ ಸಂಭಾವನೆ ಮತ್ತು ವಿವಿಧ ಭತ್ಯಗಳ ದರಗಳನ್ನು ವಿವಿಧ ವಿಶ್ವವಿದ್ಯಾಲಯಗಳೊದಿಗೆ ತುಲನ ಮಾಡುವುದರೊಂದಿಗೆ, ಸಿದ್ದಪಡಿಸಿ ಮುಂಬರುವ ಕಾರ್ಯ ನಿರ್ವಾಹಕ ಪರಿಷತ್ತಿನ ಸಭೆಯಲ್ಲಿ ವರದಿ ಮಂಡಿಸಿ ಅನುಮೋದನೆ ಪಡೆಯಬಹುದಾಗಿದೆ ಎಂಬ ಸಲಹೆ ನೀಡಿದರು.

ಮುಂದುವರೆದು ಈಗಾಗಲೇ ಪ್ರಥಮ ಸಮೆಸ್ಟರ್‌ನ ಸ್ನಾತಕ ಪದವಿ ಪರೀಕ್ಷೆಗಳು ಜರುಗಿದ್ದು, ಇದಕ್ಕೆ ಸಂಬಂಧಪಟ್ಟಂತೆ ಉಪನ್ಯಾಸಕರಿಗೆ ಮತ್ತು ಪರೀಕ್ಷಾ ಸಿಬ್ಬಂದಿಗಳಿಗೆ ಸಂಭಾವನೆ ಮತ್ತು ವಿವಿಧ

ಭತ್ಯೆಗಳ ನೀಡಬೇಕಾಗಿರುವುದರಿಂದ, ಇವರುಗಳಿಗೆ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ನೀಡುವ ಸಂಭಾವನೆಯನ್ನು ಮತ್ತು ವಿವಿಧ ಭತ್ಯೆಗಳನ್ನು ನೀಡಲು ಕ್ರಮ ಜರುಗಿಸುವ ಕುರಿತಂತೆ ಕಾರ್ಯನಿರ್ವಾಹಕ ಪರಿಷತ್ತಿನ ಅಭಿಪ್ರಾಯ ಕೋರಿದರು.

ಎರಡೂ ಸಲಹೆಗಳಿಗೆ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸಕಾರಾತ್ಮಕವಾಗಿ ಸ್ಪಂದಿಸಿ ಸದರಿ ವಿಷಯವನ್ನು ಅನುಮೋದಿಸಲು ನಿರ್ಣಯಿಸಲಾಯಿತು.

***ವಿಷಯ ಸಂಖ್ಯೆ 3: ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರ ಗುತ್ತಿಗೆ ನೌಕರರ ವೇತನವನ್ನು ಹೆಚ್ಚಳ ಮಾಡುವ ಕುರಿತು ಚರ್ಚಿಸಲು ಮಾನ್ಯ ಹಣಕಾಸು ಅಧಿಕಾರಿಗಳು ಸಭೆಯ ಅಧ್ಯಕ್ಷರ ಅನುಮತಿ ಪಡೆದು ಸಭೆಗೆ ಸದರಿ ವಿಷಯದ ಕುರಿತು ವಿವರಿಸಿ ಮಾನ್ಯ ಸದಸ್ಯರ ಸಲಹೆ ಸೂಚನೆ ನೀಡಲು ಕೋರಿದರು.***

*ಹಣಕಾಸು ಅಧಿಕಾರಿಗಳು ಸದರಿ ವಿಷಯದ ಕುರಿತು ಮಾತನಾಡುತ್ತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಹೊರಗುತ್ತಿಗೆ ಸಿಬ್ಬಂದಿಗಳಿಗೆ ಏಕರೀತಿಯ ವೇತನ ಹಾಗೂ ಭತ್ಯೆಗಳ ಕುರಿತು ದಿನಾಂಕ:19–08–2021 ರಂದು ಹೊರಡಿಸಿದ ನಡಾವಳಿಗಳ ಕುರಿತು ಸಭೆಯ ಗಮನಕ್ಕೆ ತಂದರು. ಅದರಂತೆ ವಿಶ್ವವಿದ್ಯಾಲಯವೂ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆಯಲ್ಲಿ ಬರುವುದರಿಂದ ಸದರಿ ದರಗಳಂತೆ ವೇತನ ಹಾಗೂ ಭತ್ಯೆಗಳನ್ನು ಪಾವತಿಸುವ ಕುರಿತಂತೆ ಕ್ರಮಕೈಗೊಳ್ಳುವ ಕುರಿತು ಸರ್ಕಾರದ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿರುವುದಾಗಿ ತಿಳಿಸಿದರು.*

*ಪ್ರೊ.ವೀರಭದ್ರಯ್ಯ ರವರು ಮಾತನಾಡುತ್ತ ವಿಶ್ವವಿದ್ಯಾಲಯಕ್ಕೆ ಬೋಧಕೇತರ ಸಿಬ್ಬಂದಿ ಅತಿ ಅವಶ್ಯಕವಾಗಿದ್ದು ಅವರ ವೇತನ ಹೆಚ್ಚಳ ಮಾಡಬೇಕಾಗಿರುತ್ತದೆ. ವಿಶ್ವವಿದ್ಯಾಲಕ್ಕೆ ಕಾರ್ಯಭಾರದ ಅನುಸಾರ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿದೆಯೇ ಎಂದು ಪ್ರಶ್ನಿಸುತ್ತಾ, ವೇತನ ಹೆಚ್ಚಳ ಮಾಡುವದನ್ನು ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಹಣಕಾಸು ಅಧಿಕಾರಿಗಳಿಗೆ ಸೂಚಿಸಿದರು.*

*ಮಾನ್ಯ ಕುಲಪತಿಗಳು ಮಾತನಾಡುತ್ತ ಸರ್ಕಾರದಿಂದ 172 ಹುದ್ದೆಗಳು ಈಗಾಗಲೇ ಮಂಜೂರಾಗಿವೆ ಮತ್ತು ಕಳೆದ ವರ್ಷ ಹಣಕಾಸು ಸಮಿತಿ ಹಾಗೂ ಕಾರ್ಯ ನಿರ್ವಾಹಕ ಪರಿಷತ್ತಿನ ಅನುಮೋದಿಸಿದಂತೆ ಬೋಧಕ ಸಿಬ್ಬಂದಿಗಳಿಗೆ ಯುಜಿಸಿ ನಿಯಮಾನುಸಾರ ಮತ್ತು ಅವರ ಅನುಭವದ ಆಧಾರದ ಮೇಲೆ ವೇತನವನ್ನು ಹೆಚ್ಚಿಸಲಾಗಿದೆ. ಹೊರಗುತ್ತಿಗೆ ನೌಕರರ ವೇತನ ಹೆಚ್ಚಳ ಮಾಡಲು ಮುಂಬರುವ ಹಣಕಾಸು ಸಮಿತಿ ಸಭೆಯಲ್ಲಿ ವಿಷಯ ಮಂಡಿಸಿ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಇದಕ್ಕೆ ಎಲ್ಲ ಸದಸ್ಯರು ಹೊರಗುತ್ತಿಗೆ ಸಿಬ್ಬಂದಿಗಳ ವೇತನ ಹೆಚ್ಚಿಗೆ ಮಾಡುವುದರ ಪರವಾಗಿರುವುದಾಗಿ ತಿಳಿಸಿದರು. ವಿಶ್ವವಿದ್ಯಾಲಯಕ್ಕೆ ಸರ್ಕಾರದ ಹಲವು ಯೋಜನೆಗಳು ಮಂಜೂರಾಗಿರುವುದರಿಂದ ಕಾರ್ಯ ನಿರ್ವಹಿಸಲು ಹೆಚ್ಚು ಮಾನವ ಸಂಪನ್ಮೂಲದ ಅವಶ್ಯಕತೆ ಇರುತ್ತದೆ.*

*ಮಾನ್ಯ ಹಣಕಾಸು ಅಧಿಕಾರಿಗಳು ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಹುದ್ದೆಗಳ ಅನ್ವಯ ಹೊರಗುತ್ತಿಗೆ ನೌಕರರನ್ನು ಭರ್ತಿ ಮಾಡಲಾಗಿದ್ದು, ಸಿಬ್ಬಂದಿಗಳು ಹೆಚ್ಚುವರಿ ಸಮಯ (Overtime) ಕಾರ್ಯ ನಿರ್ವಹಿಸುತ್ತಿದ್ದು ಹೆಚ್ಚುವರಿ ಭತ್ಯೆಯನ್ನು (Overtime allowance) ನಿಯಮಾನುಸಾರ ನೀಡಬಹುದಾಗಿದೆ ಎಂದು ತಿಳಿಸಿದರು. ಇದಕ್ಕೆ ಸಭೆಯಲ್ಲಿ ಎಲ್ಲ ಸದಸ್ಯರುಗಳು ಚರ್ಚಿಸಿ ಹಣಕಾಸು ಸಮಿತಿಯ ಅಭಿಪ್ರಾಯ ಪಡೆದು ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.*

**ಸಾಮಾನ್ಯ ಚರ್ಚೆಗಳು:**

1. ಮಾನ್ಯ ಸದಸ್ಯರಾದ ಪ್ರೊ.ವೀರಭದ್ರಯ್ಯ ರವರು ವಿಶ್ವವಿದ್ಯಾಲಯದಲ್ಲಿ ಖಾಯಂ ಸಿಬ್ಬಂದಿಗಳ ನೇಮಕಾತಿ ಕುರಿತು ಮಾಹಿತಿ ಕೋರಿದರು. ಮಾನ್ಯ ಕುಲಪತಿಗಳು ಮಾತನಾಡುತ್ತ ಈಗಾಗಲೇ ವಿಶ್ವವಿದ್ಯಾಲಯವು ಖಾಯಂ ಹುದ್ದೆಗಳನ್ನು ವಿದ್ಯಾರ್ಹತೆ ಗನುಸಾರ ಸೃಜಿಸಲಾಗಿದ್ದು, C & R ನಿಯಮಗಳನ್ನು ರಚಿಸಿ ಮಾನ್ಯ ಘನತೆವೆತ್ತ ರಾಜ್ಯಪಾಲರಿಂದ ಅನುಮೋದನೆ ಪಡೆಯಲಾಗಿರುತ್ತದೆ ಎಂದು ತಿಳಿಸಿದರು.
2. ಮಾನ್ಯ ಸದಸ್ಯರಾದ ಪ್ರೊ. *ಷಣ್ಮುಖ* ರವರು ವಿಶ್ವವಿದ್ಯಾಲಯದಲ್ಲಿ ಖಾಯಂ ಸಿಬ್ಬಂದಿಗಳ ನೇಮಕಾತಿಗೆ ಕುರಿತಂತೆ ವಿವರಣೆ ಕೋರಿದರು. ಅದಕ್ಕೆ ಮಾನ್ಯ ಕುಲಪತಿಗಳು ನೇಮಕಾತಿ ಪ್ರಕ್ರೀಯೆ ಸರ್ಕಾರದ ನಿಯಮಾನುಸಾರ ನಡೇಸಬೇಕಾಗಿರುವುದರಿಂದ ಮತ್ತು ಸರ್ಕಾರದ ಅನುಮತಿ ಪಡೆಯಬೇಕಾಗಿರುವುದರಿಂದ, ಇದಕ್ಕೆ ಸಂಬಂಧಪಟ್ಟಂತೆ *ಸೂಕ್ತ ಕ್ರಮ ಜರುಗಿಸಲಾಗುತ್ತಿರುವದಾಗಿ* ಎಂದು ತಿಳಿಸಿದರು.
3. ಮಾನ್ಯ ಸದಸ್ಯರಾದ ಶ್ರೀ.ಸುಧೀರ ಗೋರ್ಪಡೆ ರವರು ವಿಶ್ವವಿದ್ಯಾಲಯದಿಂದ ರಾಜ್ಯದ ಇತರೆ ಸ್ಥಳಗಳಲ್ಲಿ ಕಾಲೇಜು ಸ್ಥಾಪನೆಗೆ ಹಾಗೂ ಬೇರೆ ಕಾಲೆಜುಗಳಿಗೆ ಮಾನ್ಯತೆ ನೀಡುವ ಅವಕಾಶವಿದೇಯೇ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರವಾಗಿ ಮಾನ್ಯ ಕುಲಪತಿಗಳು ಕ.ರಾ.ಗ್ರಾ.ಪಂ.ರಾ ವಿವಿ ವಿಶಿಷ್ಠ ವಿಶ್ವವಿದ್ಯಾಲಯವಾಗಿದ್ದು, ಕಾಲೇಜುಗಳಿಗೆ ಮಾನ್ಯತೆ ನೀಡಲು ವಿಶ್ವವಿದ್ಯಾಲಯದ ಅಧಿನಿಯಮದ ಪ್ರಕಾರ ಅವಕಾಶವಿರುವುದಿಲ್ಲಾ ಎಂದು ತಿಳಿಸಿದರು.
4. ಮಾನ್ಯ ಸದಸ್ಯರಾದ ಡಾ.ಡಿ.ಪಿ. ರಮೇಶ ರವರು ವಿಶ್ವವಿದ್ಯಾಲಯದಲ್ಲಿ ಸಂಶೋದನೆ ಕಾರ್ಯಗಳ ಕುರಿತು ಮಾಹಿತಿ ಕೋರಿದರು. ಇದಕ್ಕೆ ಉತ್ತರವಾಗಿ ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯವು ಹೆಚ್ಚು ಸಂಶೋದನೆ ಕಾರ್ಯಗಳನ್ನು ಬಲಿಷ್ಠಗೊಳಿಸಲು ಯೋಜನೆ ರೂಪಿಸುತ್ತಿದೆ ಎಂದು ವಿವರಿಸಿದರು.
5. ಮಾನ್ಯ ಸದಸ್ಯರಾದ ಪ್ರೊ.ವೀರಭದ್ರಯ್ಯ ರವರು ವಿಶ್ವವಿದ್ಯಾಲಯದ ಸ್ಥಾಪನಾ ದಿನ ಆಚರಣೆ ಮಾಡಲಾಗುತ್ತಿದೆಯೇ ಎಂದು ಮಾಹಿತಿ ಕೋರಿದರು. ಇದಕ್ಕೆ ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯ ಸ್ಥಾಪನಾ ದಿನ ಎಂದು ಇಲ್ಲಿವರೆಗೆ ನಿಗದಿ ಪಡಿಸಿರುವುದಿಲ್ಲಾ ಮುಂದಿನ ದಿನಮಾನದಲ್ಲಿ ವಿಶ್ವವಿದ್ಯಾಲಯ ಲೋಕಾರ್ಪಣೆಯಾದ ದಿನವನ್ನು ಸಂಸ್ಥಾಪನಾ ದಿನ ಎಂದು ಆಚರಿಸಬಹುದಾಗಿದೆ ಎಂದು ತೀಳಿಸಿದರು.
6. ಮಾನ್ಯ ಸದಸ್ಯರಾದ ಶ್ರೀಮತಿ. ಅನುರಾಧಾ ಶೇಷಗಿರಿ ರವರು ಸಿರಿಧಾನ್ಯಗಳ ಕೃಷಿಗೆ ಒತ್ತು ನೀಡಬೇಕಾಗಿ ಕೋರಿದರು. ಸದರಿ ವಿಷಯಕ್ಕೆ ಮಾನ್ಯ ಕುಲಪತಿಗಳು ಸಿರಿಧಾನ್ಯಗಳ ಕೃಷಿ ಅಭಿವೃದ್ಧಿ ಪಡಿಸಿ, ಮೌಲ್ಯಧಾರಿತ ಪಡಿಸಲು ಉತ್ಸುಕವಾಗಿದ್ದು ಸದರಿ ಕೃಷಿಯಲ್ಲಿ ಅನುಭವವಿರುವ ಶ್ರೀಮತಿ. ಅನುರಾಧಾ ಶೇಷಗಿರಿ ರವರಿಗೆ ಸಲಹೆ ಸೂಚನೆ ನೀಡಲು ಕೋರಿದರು.
7. *ಸದಸ್ಯರಾದ ಶ್ರೀ. ವಿಶ್ವೇಶ್ವರ್ ಸಜ್ಜನ ರವರು ಕೃಷಿ ಮೇಳದಂತೆ* ಕ.ರಾ.ಗ್ರಾ.ಪಂ.ರಾ *ವಿಶ್ವವಿದ್ಯಾಲಯದಿಂದ **"ಗ್ರಾಮೀಣಾಭಿವೃದ್ಧಿ ಮೇಳ"** ಹಮ್ಮಿಕೊಳ್ಳಲು ಮತ್ತು ಆಹಾರ ದಾನ್ಯಗಳಿಗೆ ಮೌಲ್ಯಾದಾರಿತ ವ್ಯವಸ್ಥೆ ಕಲ್ಪಿಸಲು ತಾಂತ್ರಿಕತೆಯ ಕುರಿತು ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ತರಬೇತಿ ನೀಡಬೇಕೆಂದು ವಿನಂತಿಸಿದರು. ಇದಕ್ಕೆ ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯವು "ಗ್ರಾಮೀಣಾಭಿವೃದ್ಧಿ ಮೇಳ" ಹಮ್ಮಿಕೊಳ್ಳಬಹುದಾಗಿದ್ದು ಇದರಿಂದ ಗ್ರಾಮೀಣ ಸಂಸ್ಕೃತಿ, ಕ್ರೀಡೆ ಮತ್ತು*

ಗ್ರಾಮೀಣ ಜನ ಜೀವನ ಅರ್ಥೈಸಕೊಳ್ಳಬಹುದಾಗಿದ್ದು ಇದೇ ಹಾದಿಯಲ್ಲಿ ವಿಶ್ವವಿದ್ಯಾಲಯದ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳನ್ನು ತೊಡಗಿಸಬಹುದಾಗಿದೆ ಮತ್ತು ಇದಕ್ಕೆ ಕಾರ್ಯ ನಿರ್ವಾಹಕ ಪರಿಷತ್ತಿನ ಸಲಹೆ ಸೂಚನೆ ಅಗತ್ಯವಾಗಿರುತ್ತದೆ ಎಂದು ವಿನಂತಿಸಿದರು.

ಮೇಲಿನ ಚರ್ಚೆಗಳೊಂದಿಗೆ, ಮಾನ್ಯ ಕುಲಪತಿಗಳು ಮತ್ತು ಕುಲಸಚಿವರು ಎಲ್ಲ ಸದಸ್ಯರಿಗೆ ಧನ್ಯವಾದ ತಿಳಿಸುತ್ತಾ ಕಾರ್ಯ ನಿರ್ವಾಹಕ ಪರಿಷತ್ತಿನ ಸಭೆ ಮುಕ್ತಾಯಗೊಳಿಸಲಾಯಿತು.

ಕುಲಸಚಿವರು | ಕುಲಪತಿಗಳು